ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 34 ಆಗಸ್ಟ್ 29, 1982 ಬೆಲೆ 60 ಪೈಸೆ

ಪೋಲೀಸರೂ ಹೋರಾಟದ ಕಣಕ್ಕೆ

ಸ್ವಾತಂತ್ರ್ಯಾನಂತರ ದೇಶವನ್ನಾಳಿಕೊಂಡು ಬಂದ ಭೂಮಾಲೀಕ - ಬಂಡವಾಳಶಾಹಿ ಪಕ್ಷಗಳು ಅನುಸರಿಸುತ್ತಾ ಬಂದ ದಿವಾಳಿಖೋರ ಆರ್ಥಿಕ ನೀತಿಗೆದುರಾಗಿ ಸಮಾಜದ ಎಲ್ಲ ದುಡಿಯುವ ವಿಭಾಗಗಳೂ ಸಿಡಿದೆದ್ದಿವೆ. ಇಷ್ಟು ದಿನ ಪ್ರಭುತ್ವದ ರಕ್ಷಕರಾಗಿದ್ದ ಪೋಲೀಸರು ತಮ್ಮ ಬೇಡಿಕೆಗಳಿಗಾಗಿ ಸಿಡಿದೆದ್ದು ನಿಂತಿದ್ದಾರೆ. ಗಾಬರಿಗೊಂಡಿರುವ ಸರಕಾರ ಕ್ರೂರ ದಮನ ಕ್ರಮಗಳಿಂದ ಪೋಲೀಸರನ್ನು ಸದೆಬಡಿಯಲು ಪ್ರಾರಂಭಿಸಿದೆ. ಸಿ. ಪಿ. ಐ. (ಎಂ) ಪಿ.ಬಿ.ಯು ಪೋಲೀಸರ ಬೇಡಿಕೆಗಳನ್ನು ಬೆಂಬಲಿಸಿ, ಈ ಸಂದರ್ಭದಲ್ಲಿ ಮುಂಬೈನಲ್ಲಿ ನಡೆದ ಗೋಲಿಬಾರನ್ನು ಖಂಡಿಸಿ ಹೇಳಿಕೆಯೊಂದನ್ನು ಹೊರಡಿಸಿದೆ. ಹೇಳಿಕೆಯ ಸಾರಾಂಶ ಇಂತಿದೆ :

ಪೋಲೀಸ್ ಮತ್ತು ನಾಗರೀಕರ ಮೇಲೆ ಮುಂಬಯಿಯಲ್ಲಿ ನಡೆದ ಗೋಲಿಬಾರನ್ನು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಪೊಲಿಟ್ ಬ್ಯೂರೋ ಬಲವಾಗಿ ಖಂಡಿಸುತ್ತದೆ. ತಮ್ಮ ನ್ಯಾಯಯುತ ಬೇಡಿಕೆಗಳಿಗಾಗಿ ಪೋಲೀಸರು ನಡೆಸಿರುವ ಹೋರಾಟಕ್ಕೆ ಪಿ.ಬಿ. ಸಂಪೂರ್ಣ ಬೆಂಬಲ ನೀಡುತ್ತದೆ.

ಪೋಲೀಸರ ಮೇಲೆ ಗೋಲಿಬಾರು ಮಾಡಿದ ಕೆಲವೇ ನಿಮಿಷದಲ್ಲೇ ಮಹಾರಾಷ್ಟ್ರ ಸರಕಾರ ಪೋಲೀಸರ ಬೇಡಿಕೆಗಳ ಕುರಿತು ವಿಚಾರಮಾಡಿ ವರದಿ ಸಲ್ಲಿಸಲು ಒಂದು ಕಮಿಟಿ ನೇಮಿಸಿರುವುದನ್ನು ನೋಡುವಾಗ, ಪೋಲೀಸ್ ಹೋರಾಟ ಸರಿಯಾಗಿದ್ದು ಸರಕಾರ ತಪ್ಪಿದೆಂಬುದನ್ನು ತೋರ್ಪಡಿಸುತ್ತದೆ. ಕಳೆದ 7-8 ತಿಂಗಳಿಂದಲೂ ಬೇಡಿಕೆಗಳ ಕುರಿತು ಮನವಿಗಳನ್ನು ಸಲ್ಲಿಸಿದರೂ ಕೂಡ ಸರಕಾರ ಕಣ್ಣು ತೆರೆಯಲಾರದಾದಾಗ, ಆಗಸ್ಟ್ 15 ರಂದು ಪೋಲೀಸರು ಮತಪ್ರದರ್ಶನ ಮಾಡಬೇಕಾಯಿತು.

ಮಹಾರಾಷ್ಟ್ರದ-ಹರ್ಯಾಣದ ಪೋಲೀಸರು ತಮ್ಮ ಬೇಡಿಕೆಗಳ ಪರಿಹಾರಕ್ಕಾಗಿ ನಡೆಸಿರುವ ಚಳುವಳಿಯ ಮೇಲೆ ಸರಕಾರ ನಡೆಸಿರುವ ಅಮಾನುಷ ದಬ್ಬಾಳಿಕೆಯು, ಇತರ ವರ್ಗದ ಜನರ ಚಳುವಳಿಯನ್ನು ಹತ್ತಿಕ್ಕಲು ನಡೆಸಿರುವ ದಬ್ಬಾಳಿಕೆಯ ಒಂದು ಅಂಗವಾಗಿದೆ.

ಹರಿಯಾಣ ಸರಕಾರ ಸಶಸ್ತ್ರ ಪೋಲೀಸರ ಮೇಲೆ ಉಗ್ರಕ್ರಮ ಕೈಗೊಂಡು 389 ಪೋಲೀಸರನ್ನು ವಜಾ ಮಾಡಿದೆ. ಮಹಾರಾಷ್ಟ್ರದಲ್ಲಿ ನೂರಾರು ಜನರನ್ನು ಬಂಧನದಲ್ಲಿಡಲಾಗಿದೆ. ಕೆಲವರನ್ನು ವಜಾ ಮಾಡಲಾಗಿದೆ.

ನಮ್ಮ ದೇಶದ ಎಲ್ಲ ಪ್ರಜಾಪ್ರಭುತ್ವ ಶಕ್ತಿಗಳು ಸರಕಾರದ ಇಂಥ ದಬ್ಬಾಳಿಕೆಯನ್ನು ಖಂಡಿಸಿ, ಪೋಲೀಸರ ನ್ಯಾಯವಾದ ಬೇಡಿಕೆಗಳನ್ನು ಸರಕಾರ ಒಪ್ಪಿಕೊಳ್ಳುವಂತೆ ಮಾಡುತ್ತವೆಂದು ಪಿ.ಬಿ. ಆಸೆ ವ್ಯಕ್ತ ಮಾಡುತ್ತದೆ.

ಪೋಲೀಸರ ಚಳುವಳಿಗೆ ಬೆಂಬಲ ನೀಡುವ ಸಲುವಾಗಿ ಮತ್ತು ಗೋಲಿಬಾರ್‌ನಲ್ಲಿ ಮೃತರಾದವರ ಬಗ್ಗೆ ಸಂತಾಪ ವ್ಯಕ್ತಪಡಿಸಲು ಸಿ. ಪಿ. ಐ. (ಎಂ), ಸಿ. ಪಿ. ಐ. ಜನತಾ ಪಾರ್ಟಿ, ಶೇತಕರಿ ಕಾಮಗಾರಪಾರ್ಟಿಗಳೆಲ್ಲ ಮಹಾರಾಷ್ಟ್ರ ಬಂದ್ ಆಚರಿಸಿರುವುದು ಪ್ರಶಂಸನೀಯ.

●

ಬಣ್ಣ ಬಯಲು

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಸೆಕ್ರೇಟೆರಿಯಟ್ ಈ ಕೆಳಕಂಡ ಪತ್ರಿಕಾ ಪ್ರಕಟನೆಯನ್ನು ಹೊರಡಿಸಿದೆ. ಪತ್ರಿಕಾ ಪ್ರಕಟನೆಯ ಪೂರ್ತಿ ಪಾಠ ಇಂತಿದೆ :

"ನಿಮ್ನ ಜಾತಿ ಮತ್ತು ನಿಮ್ನ ವರ್ಗ (ಪಂಗಡಗಳ) ಕಮಿಷನ್ನಿನ ಅಧ್ಯಕ್ಷ ಶ್ರೀ ಕೆ. ರಾಜಮಲ್ಲು ಅವರು ಕರ್ನಾಟಕ ರಾಜ್ಯದಲ್ಲಿ ಗುಂಡೂರಾವ್ ನೇತೃತ್ವದ ಕಾಂಗ್ರೆ ಸರಕಾರದ ಪೊಳ್ಳು ಸಾಧನೆಗಳನ್ನು ಬಯಲಿಗೆಳೆದಿರುವರು. ನಿಮ್ನ ಜಾತಿ ಮತ್ತು ನಿಮ್ನ ಪಂಗಡಗಳ ಜನರಿಗಾಗಿ ತಯಾರಿಸಿರುವ ಯೋಜನೆಗಳನ್ನು ಕಾರ್ಯಗತಗೊಳಿಸುವುದರಲ್ಲಿ ರಾಜ್ಯ ಸರಕಾರದ ಅಧಿಕಾರಿಗಳಿಗೆ ಇರುವ ಅನಾಸಕ್ತಿ ಮತ್ತು ನಿಷ್ಠೆ ಇಲ್ಲದಿರುವುದರ ಬಗ್ಗೆ ರಾಜಮಲ್ಲು ಅವರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ."

"ರಾಜಮಲ್ಲು ಅವರ ದೃಷ್ಟಿಯಲ್ಲಿ ಅತ್ಯಂತ ಕೆಟ್ಟ ಅಂಶವೆಂದರೆ ನಿಮ್ನ ಜಾತಿ ಮತ್ತು ಪಂಗಡಗಳ ಜನತೆಗಾಗಿ ಮಾಡಿರುವ ಯೋಜನೆಗಳಿಗೆ ಬೇಕು ಬೇಕೆಂದೇ ನಿಧಿಯನ್ನು ಬಿಡುಗಡೆ ಮಾಡದಿರುವುದು. ಸರಕಾರವು ತಯಾರಿಸಿರುವ 29 ಯೋಜನೆಗಳಿಗೆ ವರ್ಷದ ಕೊನೆಯಲ್ಲಿ ನಿಧಿಯನ್ನು ಬಿಡುಗಡೆ ಮಾಡಿ, ಹಣದ ದೊಡ್ಡ ಮೊತ್ತದ ಪ್ರಯೋಜನವನ್ನು ನಿಮ್ನ ಜಾತಿ ಮತ್ತು ಪಂಗಡಗಳ ಜನತೆ ಪಡೆಯದಂತೆ ಮಾಡಲಾಗಿದೆ. ಇದು ಅತ್ಯಂತ ಆಶ್ಚರ್ಯಕರ ವಿಷಯವಾಗಿದೆ. ಒಂದು ಕುಟುಂಬಕ್ಕೆ ಒಂದು ಹಸು, ಜನತಾ ಮನೆ ಯೋಜನೆ, ಗಾರ್ಡನ್ ಯೋಜನೆ, ಹಿಂದುಳಿದ ಜನಾಂಗಗಳ ವಿದ್ಯಾರ್ಥಿಗಳಿಗೆ ಸರಿಯಾದ ವಿದ್ಯಾರ್ಥಿನಿಲಯಗಳ ಯೋಜನೆ, ಇವೆಲ್ಲಾ ಸಮಸ್ಯೆಗಳ ಪರಿಹಾರಕ್ಕೆ ಏನೇನೂ ಸಾಲದು ಎಂದು ರಾಜಮಲ್ಲು ಹೇಳಿರುವರು."

"ಹಿಂದುಳಿದ ಜನಾಂಗಗಳನ್ನು ಉದ್ಧಾರ ಮಾಡುವುದರ ಬಗ್ಗೆ ತನ್ನ ಸರಕಾರದ ಸಾಧನೆಗಳ ಬಗ್ಗೆ ಶ್ರೀ ಗುಂಡೂರಾವ್ ಅವರು ಉದ್ದುದ್ದದ ಮಾತುಗಳನ್ನಾಡುತ್ತಿದ್ದಾರೆ. ಆದರೆ ರಾಜಮಲ್ಲು ಅವರು 3 ತಿಂಗಳುಗಳ ಹಿಂದೆಯೇ ಸರಕಾರದ ಪೊಳ್ಳು ಸಾಧನೆಗಳನ್ನು ಬಯಲಿಗೆಳೆದಿರುವರಾದರೂ, ರಾಜ್ಯ ಸರಕಾರವು ತನ್ನ ಕೆಲಸದಲ್ಲಿ ಏನೇನೂ ಸುಧಾರಿಸಿಲ್ಲ. ನಿಮ್ನ ಜಾತಿ ಮತ್ತು ಪಂಗಡಗಳ ಜನತೆಗಾಗಿ ತಯಾರಿಸಿರುವ ಯೋಜನೆಗಳನ್ನು ಸರಿಯಾಗಿ ಕಾರ್ಯಗತಗೊಳಿಸುವುದರಲ್ಲಿ ಗುಂಡೂರಾವ್ ಸರಕಾರವು ತೋರಿರುವ ಅನಾಸಕ್ತಿಯ ಬಗ್ಗೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಮಂಡಲಿಯು ಸರಕಾರವನ್ನು ಕಟುವಾಗಿ ಟೀಕಿಸುತ್ತದೆ. ಸರಕಾರವು ಹಿಂದುಳಿದ ಜನಾಂಗಗಳಿಗಾಗಿ ತಯಾರಿಸಿರುವ ಯೋಜನೆಗಳು ಏನೇನೂ ಸಾಲದೆಂದೂ, ಈ ಯೋಜನೆಗಳು ಸಮಸ್ಯೆಗಳನ್ನು ಪರಿಹಾರ ಮಾಡುವುದರಲ್ಲಿ ಹೆಚ್ಚಿಗೆ ಏನನ್ನೂ ಸಾಧಿಸಲಾರವೆಂದೂ ಸಿ ಪಿ ಐ. (ಎಂ) ನಂಬುತ್ತದೆಯಾದರೂ, ಈಗಿರುವ ಯೋಜನೆಗಳ ಕನಿಷ್ಠ ಪ್ರಯೋಜನಗಳನ್ನು ಪಡೆಯಬೇಕಾದರೂ ನಿಮ್ನ ಜಾತಿ ಮತ್ತು ಪಂಗಡಗಳ ಜನರು ಉಳಿದ ಎಲ್ಲಾ ಪ್ರಜಾಪ್ರಭುತ್ವ ವಿಭಾಗದವರ ಬೆಂಬಲದೊಂದಿಗೆ ಸಂಘಟಿತ ಹೋರಾಟಗಳನ್ನು ನಡೆಸಲೇಬೇಕೆಂದು ಸಿ ಪಿ ಐ. (ಎಂ) ನಂಬುತ್ತದೆ. ಮುಂದಿನ ದಿನಗಳಲ್ಲಿ ಅಂತಹ ಹೋರಾಟಗಳು ಬೆಳೆದು ಬಂದಾವೆಂದೂ ಸಿ. ಪಿ. ಐ. (ಎಂ) ಆಶಿಸುತ್ತದೆ."

ಅವಿಶ್ವಾಸ ಸೂಚನೆಗೆ ಪ್ರಧಾನಿಯ ಬೇಜವಾಬ್ದಾರಿ ಉತ್ತರ

'ಧಾಳಿಯೇ ರಕ್ಷಣೆಯ ಉತ್ತಮ ವಿಧಾನ' ಎಂದು ನಂಬುವ ಜನರ ಗುಂಪಿಗೆ ನಮ್ಮ ಪ್ರಧಾನಿಯವರು ಸೇರಿದ್ದಾರೆಂದು ಲೋಕಸಭೆಯಲ್ಲಿ ಅವಿಶ್ವಾಸ ಸೂಚನೆಗೆ ಅವರು ನೀಡಿದ ಉತ್ತರದಿಂದ ತಿಳಿಯುತ್ತದೆ.

ಲೋಕಸಭೆಯಲ್ಲಿ ವಿರೋಧ ಪಕ್ಷಗಳು 'ಕ್ಷುಲ್ಲಕ ವಿಷಯ'ಗಳನ್ನು ಚರ್ಚಿಸುತ್ತವೆ; 'ಸರ್ಕಾರದ ಮಹತ್ವದ ಹಾಗೂ ಮೂಲಭೂತ ನೀತಿಗಳ ಬಗ್ಗೆ ಚಕಾರವೆತ್ತುವುದಿಲ್ಲ'; ಮತ್ತು 'ಲೋಕಸಭೆಯ ಸಮಯವನ್ನು ಹಾಗೂ ದೇಶದ ಹಣವನ್ನು ಹಾಳುಗೆಡವಿವೆ'; 'ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ನಿಯಮಗಳನ್ನು ಮೀರಿವೆ' ಮತ್ತು 'ಬೇಜವಬ್ದಾರಿತನ'ದಿಂದ ವರ್ತಿಸಿವೆ ಮುಂತಾಗಿ ಪ್ರತ್ಯಾರೋಪಗಳ ಪಟ್ಟಿಯನ್ನೆ ಪ್ರಧಾನಿಯವರು ಮಾಡಿದ್ದಾರೆ.

ಹಿಂದಿನ ಅಧಿವೇಶನದಲ್ಲಿ 'ಅಂತುಲೆ ಹಗರಣ' ಚರ್ಚೆಗೆ ಬಾರದಂತೆ ಆಳುವ ಪಕ್ಷ ಅಡ್ಡಿಯುಂಟುಮಾಡಿದಾಗ 'ಅವಿಶ್ವಾಸ ಸೂಚನೆ'ಯ ಮೂಲಕ ಚರ್ಚೆ ನಡೆಯಿತು. ಈ ಬಾರಿ, ಈಗಾಗಲೇ ಎಲ್ಲರಿಗೂ ಗೊತ್ತಿರುವ 'ಕುವೊ ತೈಲ ಪ್ರಕರಣ'ದ ಚರ್ಚೆಗೆ ಅವಕಾಶ ನೀಡದಂತೆ ಆಳುವ ಪಕ್ಷ ತಡೆಯುಂಟು ಮಾಡಿದ್ದೇಕೆ ?

ಉನ್ನತ ಅಧಿಕಾರದಲ್ಲಿರುವವರು ತಮ್ಮ ಅಧಿಕಾರ ದುರುಪಯೋಗಮಾಡಿರುವುದನ್ನು ಹೊರ ಹಾಕಲು ಯತ್ನಿಸುವುದು ವಿರೋಧ ಪಕ್ಷಗಳ ಜವಾಬ್ದಾರಿಯಲ್ಲವೇನು ? ಮುಖ್ಯ ಮಂತ್ರಿಯೋರ್ವನ ಅಧಿಕಾರ ದುರುಪಯೋಗ ಕ್ಷುಲ್ಲಕ ವಿಷಯವೇ ? ಲೋಕಸಭೆಯಲ್ಲಿ ತಮಗಿರುವ ಎಲ್ಲ ದಾರಿಗಳನ್ನು ಅನುಸರಿಸಿ ಇಂತ ಪ್ರಕರಣಗಳನ್ನು ಬೆಳಕಿಗೆ ತರುವುದರಿಂದ ನಿಯಮಗಳನ್ನು ಮೀರಿದಂತಾಗುತ್ತದೆಯೇ ? ವಿರೋಧ ಪಕ್ಷಗಳ ಕರ್ತವ್ಯ ನಿರ್ವಹಣೆಗೆ ಅಡ್ಡಿಯುಂಟುಮಾಡುವ ಆಳುವ ಪಕ್ಷದ ವರ್ತನೆ ಬೇಜವಬ್ದಾರಿತನದಿಂದ ಕೂಡಿಲ್ಲವೇ ?

ಇನ್ನು ಸರ್ಕಾರದ ಮಹತ್ವದ ನೀತಿಗಳ ಬಗ್ಗೆ ಅಂತರ್‌ರಾಷ್ಟ್ರೀಯ ನೀತಿಯ ಕುರಿತು, ಅಣುಯುದ್ಧದ ಬೆದರಿಕೆಯ ಬಗ್ಗೆ, ಅಲಿಪ್ತ ರಾಷ್ಟ್ರಗಳ ಸ್ವಾತಂತ್ರ್ಯ ಮತ್ತು ಪ್ರಭುತ್ವದ ಮೇಲೆ ಸಾಮ್ರಾಜ್ಯಶಾಹಿಯ ಧಾಳಿಯ ವಿಷಯಗಳನ್ನು ಕಮ್ಯೂನಿಸ್ಟರು ಸತತವಾಗಿ ಪ್ರಸ್ತಾಪಿಸುತ್ತಲೇ ಇದ್ದಾರೆ. ಸರ್ಕಾರದ ಪ್ರಗತಿಯ ಹಾದಿ ಮತ್ತು ನೀತಿ ಹೇಗೆ ದೇಶವನ್ನು ಸಮಸ್ಯೆಗಳ ಕೂಪಕ್ಕೆ ಎಳೆಯುತ್ತಿದೆ ಎನ್ನುವುದನ್ನು ತೋರಿಸಿಕೊಡುತ್ತಲೇ ಇದ್ದಾರೆ.

ತಮ್ಮ ಅದ್ಭುತ ಸಾಧನೆಗಳ ಬಗ್ಗೆ ಪ್ರಧಾನಿಯವರು ಬಡಾಯಿಕೊಚ್ಚಿಕೊಳ್ಳುತ್ತಿರುವ ಸಮಯದಲ್ಲೇ ವಿಶ್ವಬ್ಯಾಂಕ್ ವರದಿಯ ಪ್ರಕಾರ ನಮ್ಮ ದೇಶ ಪ್ರಗತಿ ಪಥದಲ್ಲಿ ಬಹಳಷ್ಟು ಹಿಂದೆ ಉಳಿದಿದೆ. ಮತ್ತು ವಿದೇಶೀ ನೆರವು ಇಲ್ಲದಿದ್ದಲ್ಲಿ, ಮುಂದುವರಿಯುವುದು ಕಷ್ಟವಾಗುತ್ತದೆ. ಇದು ಕಾಂಗ್ರೆಸ್‌ನ 'ಸ್ವಯಂ-ಆಧಾರ' ನೀತಿಯ ಫಲ !

(8ನೇ ಪುಟ ನೋಡಿ)

ಕರ್ನಾಟಕ ರಾಜ್ಯದಲ್ಲಿ

ಶಾಲೆಗಳೋ ಅಥವಾ ಕೂಡು ದೋಡ್ಡಿಗಳೋ ?

—ಎನ್ಕೆ

ದಾಂಡೇಲಿಯ ಪ್ರಾಥಮಿಕ ಶಾಲೆಗಳ ದುಸ್ಥಿತಿಯತ್ತ ಸರ್ಕಾರದ ಗಮನ ಸೆಳೆಯಲು ಸತ್ಯಾಗ್ರಹ. ಮಳೆಗಾಲದಲ್ಲಿ ಶಾಲೆ ಸೋರುತ್ತಿರುವುದರಿಂದ ಬಹುತೇಕ ಕೋಣೆಗಳು ನಿರುಪಯುಕ್ತವಾಗಿವೆ. ಶಾಲೆಗಳು ದನಗಳ ದೊಡ್ಡಿಗಿಂತಲೂ ಕಡೆಯಾಗಿವೆ. ಮಳೆಯಿಂದ ಕೆಸರು ತುಂಬಿದ ಕೋಣೆಗಳಲ್ಲಿ ಒಂದಿಂಚೂ ಒಣ ನೆಲವಿಲ್ಲ. ಉದ್ಯಮ ಕೇಂದ್ರವಾದ ದಾಂಡೇಲಿಯ ಸುದ್ದಿ ಇದು.

ಒಂದು ದಾಂಡೇಲಿಯಲ್ಲ. ಕರ್ನಾಟಕ ರಾಜ್ಯದ ಬಹುತೇಕ ಎಲ್ಲ ಪಟ್ಟಣ ಮತ್ತು ಹಳ್ಳಿಗಳಲ್ಲಿರುವ ಪ್ರಾಥಮಿಕ ಶಾಲೆಗಳ ದುರ್ಗತಿ ಇದಾಗಿದೆಂದರೆ ತಪ್ಪಾಗಲಿಕ್ಕಿಲ್ಲ. ಬಿಜಾಪುರದ ಕೆಲವು ಶಾಲೆಗಳಲ್ಲಿ ಪುಟ್ಟ ಮಕ್ಕಳೂ, ಮಾಸ್ತರರೂ ಎಷ್ಟೋ ವರ್ಷಗಳಿಂದ ಗಾಳಿ ಬೆಳಕನ್ನು ಕಾಣುತ್ತಿಲ್ಲ. ಇದರಿಂದ ದೃಷ್ಟಿ ದೋಷ ಉಂಟಾಗಿ ಹಲವಾರು ಶಿಕ್ಷಕರು ದಪ್ಪ ಗ್ಲಾಸಿನ ಕನ್ನಡಕ (ಚಶ್ಮಾ) ಉಪಯೋಗಿಸಬೇಕಾಗಿ ಬಂದಿದೆ. ಮಳೆಗಾಲದಲ್ಲಿ ತುಂತುರು ಹನಿಯಲ್ಲೇ ವಿದ್ಯಾಭ್ಯಾಸ. ತುಂತುರು ಹನಿಯ ಜೊತೆಯಲ್ಲಿ ಮಹಡಿ ಎಲ್ಲಿ ಕುಸಿದು ಬೀಳುತ್ತದೋ ಎಂಬ ಅಂಜಿಕೆ ಬೇರೆ.

ರಾಜ್ಯದ ಹೆಚ್ಚಿನ ಪ್ರಾಥಮಿಕ ಶಾಲೆಗಳು ಖಾಸಗಿ ಕಟ್ಟಡಗಳಲ್ಲಿ ನಡೆಯುತ್ತಿವೆ. ಅಂಥ ಕಟ್ಟಡಗಳಲ್ಲಿಯ ಶಾಲೆಗಳನ್ನು ಬಿಡಿಸಲು ಮಾಲಿಕರು ಕೋರ್ಟ್ ಕಟ್ಟೆ ಹತ್ತಿದ್ದಾರೆ. ಎಷ್ಟೋ ಕಡೆಗಳಲ್ಲಿ ಕೋರ್ಟ್ ಆಜ್ಞೆ ಪ್ರಕಾರ ಮಕ್ಕಳನ್ನೆಲ್ಲ ಬೀದಿಪಾಲು ಮಾಡಿದ ದಾರುಣ ಕತೆಗಳನ್ನೆಲ್ಲ ಕೇಳುತ್ತಿದ್ದೇವೆ.

ನಮ್ಮ ರಾಜ್ಯದಲ್ಲಿ ಪ್ರಾಥಮಿಕ ಶಾಲೆಗಳ ದುಸ್ಥಿತಿಯ ನೋಟ ಇದಾಗಿದೆ. ಮಕ್ಕಳಿಗೆ ಕಡ್ಡಾಯ ಶಿಕ್ಷಣಕ್ಕಾಗಿ ಕಟ್ಟಡದಿಂದ ಕಡ್ಡಾಯವಾಗಿ ಹೊರಹಾಕುವಿಕೆ. ಕಡ್ಡಾಯ ಶಿಕ್ಷಣಕ್ಕಾಗಿ ಕತ್ತಲೆ ಕೋಣೆಯಲ್ಲಿ ಕಲಿಸುವಿಕೆ, ಕಡ್ಡಾಯ ಶಿಕ್ಷಣಕ್ಕಾಗಿ ಬೀಳುವ ಬಿಲ್ಡಿಂಗಿನಲ್ಲಿ ಅಕ್ಷರಾಭ್ಯಾಸ. ವಾಹವಾ! ಎಂಥ ಕಡ್ಡಾಯ ಶಿಕ್ಷಣ !

ಒಂದು ಕಡೆ ನಮ್ಮ ರಾಜ್ಯದಲ್ಲಿಯ ಪ್ರಾಥಮಿಕ ಶಿಕ್ಷಣದ ದುರ್ಗತಿ ಹೀಗಿರುವಾಗ, ಜನವರಿ 3 ರಿಂದ ವಿಶ್ವಕನ್ನಡ ಮೇಳ 7 ದಿನಗಳ ಕಾಲ ಮೈಸೂರು ಅರಮನೆ ಆವರಣದಲ್ಲಿ ವಿಜೃಂಭಣೆಯಿಂದ ಆಚರಿಸಲು ರಾಜ್ಯ ಸರಕಾರದ ತೀರ್ಮಾನ ಪ್ರಕಟವಾಗಿದೆ. ಇದರ ಖರ್ಚು ರೂ. 6 ಕೋಟಿ. ಸುವ್ಯವಸ್ಥಿತ ಇಂಗ್ಲೀಷ್ ಮಾಧ್ಯಮದ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸುತ್ತಿರುವ ಕನ್ನಡ ಸಾಹಿತಿಗಳನ್ನು ಮೆರೆಸಲು ಈ ವಿಶ್ವಕನ್ನಡ ಮೇಳ ನಡೆಯಲಿದೆ. ಕನ್ನಡ ತಾಯಿಯ ಎಳೆ ಮಕ್ಕಳು ಪೀಠೋಪಕರಣವಿಲ್ಲದೆ ಮಣ್ಣಿನಲ್ಲೇ ಮಣ್ಣಾಗಿ ಕಲಿಯುತ್ತಿರುವಾಗ, ಬೋಧನೋಪಕರಣಗಳೂ, ಕರಿಹಲಿಗೆ, ಭೂಪಟ, ವರ್ಣಮಾಲೆಗಳಂತ ಅವಶ್ಯಕತೆಗಳನ್ನೂ ಪಡೆಯಲಾರದಾದಾಗ, ರೂ. 6 ಕೋಟಿ ಖರ್ಚಿನಿಂದ ಕನ್ನಡ ವಿಶ್ವಮೇಳ ಅಗತ್ಯವೇ ? ಮಕ್ಕಳಿಗಾಗಿ ಶಾಲೆ ಕಟ್ಟಿಸಿ, ಶಿಕ್ಷಣ ಕಲಿಸಲು ಸಲಕರಣೆಗಳ ವ್ಯವಸ್ಥೆಯಾದರೆ ಒಳಿತಲ್ಲವೇ ? ಆದರೆ ಇದಕ್ಕಾಗಿ ಹೋರಾಡುವವರಾರು ? ನಾವು ನೀವುಗಳೆಲ್ಲ ಅಲ್ಲವೇ ? ಹೋರಾಡೋಣವೇ ?

ಸರ್ಕಾರಕ್ಕೂ ಪತ್ರಿಕಾ ಸ್ವಾತಂತ್ರ್ಯ ಪವಿತ್ರ

ಪತ್ರಿಕಾ ಸ್ವಾತಂತ್ರ್ಯ ನಮಗೂ ಪರಮ ಪೂಜ್ಯ ಎಂದು ಸುದ್ದಿ ಮತ್ತು ಪ್ರಸಾರ ಖಾತೆಯ ಸಚಿವ ವಸಂತ ಸಾಠೆ ಹೇಳಿದ್ದಾರೆ. ಹಾಗೆಯೇ ವೃತ್ತಪತ್ರಿಕೆಗಳು ಜನಸೇವೆ ಮಾಡುತ್ತಿವೆ ಎಂದೂ ಸಾರಿದ್ದಾರೆ.

ಈ ಮಾತನ್ನು ಕೇಳಿ ಇಂದಿರಾ ಗಾಂಧಿ ಮತ್ತು ಗುಂಡೂರಾಯರು ದಿಗ್ಭ್ರಮೆಗೊಂಡಿದ್ದಾರಂತೆ. ಬಿಹಾರ ರಾಜ್ಯದ ಮುಖ್ಯ ಮಂತ್ರಿಯವರಂತೂ ಮಂತ್ರಿ ಸಾಠೆಯವರನ್ನು ವಜಾ ಮಾಡಬೇಕೆಂದು ಇಂದಿರಾ ಗಾಂಧಿಗೆ ಮೊರೆ ಹೋಗಿದ್ದಾರಂತೆ "ನಿಮ್ಮ ಆದೇಶವೇ ನಮ್ಮ ದಾರಿ ದೀಪ. ನಿಮ್ಮ ಆದೇಶದಂತೆಯೇ ಕರಾಳ ಪತ್ರಿಕಾ ಮಸೂದೆಯನ್ನು ವಿಧಾನಸಭೆಯಲ್ಲಿ ಮಂಜೂರು ಮಾಡಿಸಿದ್ದೇನೆ. ನಮ್ಮವರೇ ಕೆಲವರು ವಿರೋಧಿಸಿದರೂ ಕೂಡ ನಿಮ್ಮ ಕೃಪಾಕಟಾಕ್ಷದಡಿಯಲ್ಲಿ ನಾನು ಗೆದ್ದು ಬಂದಿದ್ದೇನೆ. ಹೀಗಿರುವಾಗ ನಮ್ಮ ಪಾರ್ಟಿಯ ಮಂತ್ರಿ ಸಾಠೆಯವರು ಪತ್ರಿಕೆಗಳು ಜನಸೇವೆ ಮಾಡುತ್ತಿವೆಂದು ಹೇಳಿರುವುದು ನಮ್ಮ ಬೆನ್ನಿಗೆ ಚೂರಿ ಹಾಕಿ ವಿರೋಧಿಗಳಿಗೆ (ಹೊರಗಿನವರೂ, ಒಳಗಿನವರೂ ಸೇರಿ) ಸಹಾಯ ಮಾಡಿದಂತಾಗುವುದಿಲ್ಲವೇ ? ತುರ್ತು ಪರಿಸ್ಥಿತಿ ಕೂಡಲೇ ಬರಲಿ" ಎಂದು ಬೇಡಿಕೊಂಡರಂತೆ. ಅಮ್ಮಾವ್ರ ಪ್ರತಿಕ್ರಿಯೆ ವ್ಯಕ್ತಮಾಡಲಿಲ್ಲವಂತೆ. ಆದರೆ ಪತ್ರಿಕೆಗಳಿಗೂ, ಪತ್ರಿಕಾಕರ್ತರಿಗೂ ಅಪಮಾನ ಮಾಡಿ, ತಮ್ಮ ಜನರಿಂದಲೇ ಬೆಂಗಳೂರಿನ ಪತ್ರಿಕಾ ಕಚೇರಿಗಳ ಮೇಲೆ ದಾಳಿ ನಡೆಸಿ ಸಂತುಷ್ಟರಾದ ಕರ್ನಾಟಕದ ಮುಖ್ಯ ಮಂತ್ರಿ ಗುಂಡೂರಾಯರು ಪತ್ರಿಕಾ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವ ಉದ್ದೇಶ ತಮ್ಮ ಸರಕಾರಕ್ಕಿಲ್ಲೆಂದು ಸಾರಿದ್ದಾರೆ. ಪತ್ರಿಕಾ ಸ್ವಾತಂತ್ರ್ಯವನ್ನೇ ಮೊಟಕುಗೊಳಿಸುವ ಜವಾಬ್ದಾರಿಯನ್ನು ತಾನು ಯಾಕೆ ಹೊರಬೇಕೆಂದು ಗುಂಡೂರಾಯರ ಪ್ರಶ್ನೆ. ಬಿಹಾರ ನೋಡಿ, ಕಾಶ್ಮೀರ, ನಂತರ ತಮಿಳುನಾಡು ಹೀಗೆ ಕೆಲವು ರಾಜ್ಯಗಳು ಆ ದಿಶೆಯಲ್ಲಿ ಮುಂದುವರಿದರೆ, ದಿಲ್ಲಿ ದರ್ಬಾರೇ ತುರ್ತುಪರಿಸ್ಥಿತಿಯಂತ ಮಸೂದೆಯನ್ನು ತರುವ ಯೋಚನೆಯಲ್ಲಿದ್ದಾಗ, ತಾನು ಕೈಸುಟ್ಟುಕೊಂಡು ಜನರಿಂದ ಛೀಮಾರಿ ಹಾಕಿಕೊಳ್ಳಬೇಕೇ ? ಆ ಮರ್ಯಾದೆ ಇಂದಿರಾ ಮಾತೆಗೇ ಇರಲೆಂದು ರಾಯರ ಅಭಿಮತ. ನಾನು ಹೇಳಿದಾಗ ಮಾಡು. ಈಗ ಬೇಡವೆಂದು ದಿಲ್ಲಿಯ ಆದೇಶ. ಸದ್ಯಕ್ಕೆ ನಾನು ಗೆದ್ದೆ ಎಂದು ರಾಯರ ಕಂಠೋದ್ಗಾರ. ಇಂಥ ಉದ್ಗಾರಗಳಿಗೆ ಮೈಮರೆಯದೆ ಎಚ್ಚರಿಕೆಯಿಂದಿರಬೇಕಾದ್ದು ಪತ್ರಿಕಾಕರ್ತರ ಮತ್ತು ಸಾರ್ವಜನಿಕರ ಕರ್ತವ್ಯ. ಜೇಲ್‌ಸಿಂಗರನ್ನು ರಾಷ್ಟ್ರಾಧ್ಯಕ್ಷರನ್ನಾಗಿ ಮಾಡಿದಾಗಲೇ ಪತ್ರಿಕೆಗಳಿಗೆ ಕರಿಮುಸಿ ಹಚ್ಚುವ ಸಾಧ್ಯತೆಗಳು ಹೆಚ್ಚಾಗುತ್ತಿವೆಂಬ ಎಚ್ಚರಿಕೆಯನ್ನು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿ ದೇಶದ ಜನರ ಮುಂದಿಟ್ಟಿತ್ತು. ಸಾವಕಾಶವಾಗಿ ಎದ್ದೇಳುವ ಚಟ ನಮ್ಮ ಜನತೆಯದಾಗಿರುವಾಗ, ಅವರಲ್ಲಿ ಜಾಗೃತಿಯನ್ನುಂಟುಮಾಡಿ ತೀವ್ರ ಪ್ರತಿಕ್ರಿಯೆ ವ್ಯಕ್ತಮಾಡುವಂತೆ ಮಾಡುವುದು ನಮ್ಮೆಲ್ಲರ, ಎಡ ಪ್ರಜಾಪ್ರಭುತ್ವ ಶಕ್ತಿಗಳ ಆದ್ಯ ಕರ್ತವ್ಯ. ಆ ಕರ್ತವ್ಯ ಪೂರೈಸೋಣ.

ಕೊನೆಗೂ ಪ್ರೊ|| ಗೋಕಾಕ್ ಬಾಯಿ ತೆರೆದರು

"ಕರ್ನಾಟಕದಲ್ಲಿ ಕನ್ನಡಕ್ಕೆ ಮಾನ್ಯತೆ ನೀಡಬೇಕೆಂಬ ಚಳುವಳಿಯನ್ನು "ಸರ್ವಾಧಿಕಾರತ್ವ" ಎಂದು ಕೆಲವರು ಟೀಕಿಸಿರುವರು. ಈ ಹೋರಾಟ ಯಾರ ವಿರುದ್ಧವೂ ಅಲ್ಲ. ಈ ಚಳುವಳಿ ನಮ್ಮ ರಕ್ಷಣೆಗಾಗಿ, ಪದದ ಅರ್ಥವನ್ನೇ ಅರಿತುಕೊಳ್ಳದೆ ಯಾವುದೋ ಒಂದು ತತ್ವಕ್ಕೆ ಹೊಂದಿಕೊಂಡು ಈ ಚಳುವಳಿಯನ್ನು "ಫ್ಯಾಸಿಸಂ" ಎಂದು ಕರೆದಿದ್ದಾರೆ" ಎಂದು ಗೋಕಾಕ್ ವರದಿಗೆ ಸಂಬಂಧಪಟ್ಟಂತೆ ವಿವಿಧ ವೇದಿಕೆಗಳನ್ನು ಬಳಸಿಕೊಂಡು ವ್ಯಕ್ತಪಡಿಸಿದ ಪರ ಮತ್ತು ವಿರೋಧ ಅಭಿಪ್ರಾಯಗಳನ್ನು ಒಳಗೊಂಡ "ಸಮನ್ವಯ" ವಾರ್ಷಿಕ ವಿಶೇಷಾಂಕವನ್ನು ಮೈಸೂರಲ್ಲಿ ಬಿಡುಗಡೆ ಮಾಡಿದಾಗ ವ್ಯಕ್ತಪಡಿಸಿದ ಅಭಿಪ್ರಾಯವಿದು.

5-7-80 ರಂದು ಸರಕಾರ ನೇಮಿಸಿದ ಭಾಷಾ ಸಮಿತಿಯ ಅಧ್ಯಕ್ಷರಿವರು. ಸತ್ಯಸಾಯಿ ಬಾಬಾನ ಶಿಷ್ಯರು.

ಗೋಕಾಕ್ ಸಮಿತಿಗೆ ಪರಿಶೀಲನೆಗಾಗಿ ವಹಿಸಿದ ವಿಷಯಗಳು :-

1. ಸಂಸ್ಕೃತ ಶಾಲಾ ಪಠ್ಯ ವಸ್ತುವಿನಲ್ಲಿ ಅಭ್ಯಾಸದ ವಿಷಯವಾಗಿ ಉಳಿಯಬೇಕೇ ?

2. ಉಳಿಯಬೇಕಾದರೆ ಕನ್ನಡಕ್ಕೆ ಪರ್ಯಾಯವಾಗದೆ ಉಳಿಸುವುದು ಹೇಗೆ ?

3. ತ್ರಿಭಾಷಾ ಸೂತ್ರದಂತೆ ಕನ್ನಡ ಕಡ್ಡಾಯಮಾಡಿ ಉಳಿದೆರಡು ಭಾಷೆಗಳ ಆಯ್ಕೆಯ ಸ್ವಾತಂತ್ರ್ಯವನ್ನು ವಿದ್ಯಾರ್ಥಿಗಳಿಗೆ ಬಿಡುವುದು ಸೂಕ್ತವೇ ?

ಸಮಿತಿಯ ಸಲಹೆಗಳು :-

1. 1981-82ನೆಯ ಶೈಕ್ಷಣಿಕ ವರ್ಷದಿಂದಲೇ ಕನ್ನಡ ಭಾಷೆ ಏಕೈಕ ಪ್ರಥಮ ಭಾಷೆಯನ್ನಾಗಿ ಮಾಡಿ ಅದು ಕಡ್ಡಾಯದ ವಿಷಯವಾಗಬೇಕು. (ಇತರ ಸಲಹೆಗಳ ಉಲ್ಲೇಖ ಇಲ್ಲಿ ಅಗತ್ಯವಿಲ್ಲ.)

ಕನ್ನಡವನ್ನು ಏಕೈಕ ಪ್ರಥಮ ಭಾಷೆಯನ್ನಾಗಿ ಮಾಡಬೇಕೆಂಬ ಸಮಿತಿಯ ಸಲಹೆ ಅದರ ಪರಿಶೀಲನೆಗಾಗಿ ಒಪ್ಪಿಸಿದ ವಿಷಯಗಳನ್ನು ಮೀರಿದ್ದಾಗಿದೆಂದು ಗೋಕಾಕ್ ವರದಿಯ ವಿರೋಧಿಗಳ ಅಭಿಪ್ರಾಯ.

ನಮ್ಮ ರಾಜ್ಯದಲ್ಲಿ ಹಾಗೆಯೇ ಇತರ ರಾಜ್ಯಗಳಲ್ಲಿ ತಂತಮ್ಮ ಭಾಷೆಗೆ ಪ್ರಾಧಾನ್ಯ ನೀಡಬೇಕೆಂಬುದೇ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ಸ್ಪಷ್ಟ ಅಭಿಪ್ರಾಯ. ಕನ್ನಡವೇ ಏಕೈಕ ಪ್ರಥಮ ಭಾಷೆಯನ್ನಾಗಿ ಮಾಡುವುದಕ್ಕೆ ನಮ್ಮ ವಿರೋಧ ವ್ಯಕ್ತಮಾಡಿದ್ದೇವೆ. ಭಾಷಾವಾರು ಪ್ರಾಂತಗಳ ವಿಂಗಡನೆಯ ಹಿನ್ನೆಲೆಯನ್ನೇ ತಮ್ಮ ವರದಿಯ ನಿಂದಕರು ಅರಿತುಕೊಂಡಂತಿಲ್ಲವೆಂದು ಗೋಕಾಕ್ ಹೇಳಿದ್ದಾರೆ. ಕನ್ನಡ ಪ್ರಾಂತವಾಗಬೇಕೆಂದು ಜೈಲಿಗೆ ಹೋದವರು ಚಳುವಳಿ ಹೂಡಿದವರೆಲ್ಲ ನಾವು. ಹೆಚ್ಚಿಗಲ್ಲದಿದ್ದರೂ ಪ್ರೊ|| ಗೋಕಾಕರಿಗಿರುವಷ್ಟೇ ಕನ್ನಡ ಪ್ರೇಮ ಇತರರಿಗೂ ಇದೆ. ಆದರೆ ಪ್ರೊ|| ಗೋಕಾಕ್ ಮತ್ತು ಗೋಕಾಕ್ ವರದಿ ಪರ ಚಳುವಳಿಗಾರರ ಸಂಕುಚಿತ ಭಾವನೆಗೆ ನಾವು ಒಪ್ಪುವುದಿಲ್ಲ. ಕನ್ನಡ ಕಡ್ಡಾಯವಾಗಬೇಕು, ರಾಜ್ಯ ಭಾಷೆ ಕನ್ನಡವಾಗಬೇಕು, ಸರಕಾರದ ವ್ಯವಹಾರ ಕನ್ನಡದಲ್ಲೇ ನಡೆಯಬೇಕು. ಕನ್ನಡನಾಡು, ಕನ್ನಡ ಭಾಷೆ, ಕನ್ನಡಜನ ಸರ್ವತೋಮುಖವಾಗಿ ಅಭಿವೃದ್ಧಿಗೊಳ್ಳಬೇಕು. ರಾಜ್ಯ ಭಾಷೆ ಕನ್ನಡವಾದರೆ ಕರ್ನಾಟಕದಲ್ಲಿ ನೆಲೆಸಿದವರೆಲ್ಲ ಕನ್ನಡ ಕಲಿಯಲೇಬೇಕಾಗುತ್ತದೆ. ನಮ್ಮ ದೇಶದ ಬೇರೆ ಯಾವ ರಾಜ್ಯದಲ್ಲೂ ತಮ್ಮ ರಾಜ್ಯ ಭಾಷೆಯನ್ನು ಕಡ್ಡಾಯದ ಪ್ರಥಮ ಭಾಷೆಯನ್ನಾಗಿ ಮಾಡಿರುವುದಿಲ್ಲ. ಆದರೆ ಆ ರಾಜ್ಯಗಳಲ್ಲಿ ನೆಲೆಸಿರುವವರೆಲ್ಲ ಆ ರಾಜ್ಯದ ಭಾಷೆಯನ್ನು ಕಲಿತಿದ್ದಾರೆ. ಆ ರಾಜ್ಯಗಳ ಜನತೆಯಲ್ಲೊಂದಾಗಿದ್ದಾರೆ. ಆದ್ದರಿಂದ ಗೋಕಾಕ್ ಅವರ ನಿಲುಮೆ ಅಲ್ಪ ಭಾಷಿಕರ ವಿರೋಧಿಯಾಗಿದೆಯೆಂದು ಹೇಳುವುದರಲ್ಲಿ ತಪ್ಪೇನಿಲ್ಲ. ಅದರಲ್ಲಿ ಒತ್ತಾಯದ ಅಂಶ ಇರುವುದರಿಂದ ಸರ್ವಾಧಿಕಾರದ ಗುಣಗಳನ್ನು ಹೊಂದಿದೆಂದು ಹೇಳಿದರೆ ತಪ್ಪೇನಿಲ್ಲ.

ನಾಗರೀಕರು, ನೌಕರರು ಮತ್ತು ವಿದ್ಯುತ್ ಮಂಡಲಿ

ವಿದ್ಯುತ್ ಬಳಕೆದಾರರಿಗೆ 6 ತಿಂಗಳಿಗೊಂದು ಸಲ ಬಿಲ್ಲು ಕೊಡಬೇಕೆಂಬ ನಿರ್ಣಯವನ್ನು ಕೆ.ಇ.ಬಿ. ಕೈಗೊಂಡು 8 ತಿಂಗಳಾಯಿತು. ಉಳಿತಾಯ ಯೋಜನೆಗಾಗಿ ಈ ಕ್ರಮಕೈಗೊಳ್ಳಲಾಗಿದೆಯಂತೆ. ಬೋರ್ಡಿನ ಈ ಕ್ರಮದಿಂದ ಹೆಚ್ಚು ನೌಕರರನ್ನು ನೇಮಿಸಿಕೊಳ್ಳುವ ಅವಕಾಶ ಮತ್ತು ಈಗಿರುವವರಿಗೆ ಬಡ್ತಿ ಅವಕಾಶ ತಪ್ಪುತ್ತದೆಂದು ನೌಕರ ಸಂಘದ ಆರೋಪ.

ವಿದ್ಯುತ್ ಮಂಡಲಿ ಮತ್ತು ನೌಕರರೊಳಗಷ್ಟೆ ಈ ತಂಟೆ ಸೀಮಿತವಾಗಿಲ್ಲ. ವಿದ್ಯುಶ್ಚಕ್ತಿ ಬಳಕೆಗಾರರಿಗೆ ಇದು ನೇರವಾಗಿ ಸಂಬಂಧಿಸಿದೆ. 6 ತಿಂಗಳಿಗೊಮ್ಮೆ ಬಿಲ್ಲಿನ ಹಣ ತುಂಬುವುದು ಕಷ್ಟಕರ. ರಖಂ ಹೆಚ್ಚಾಗುತ್ತದೆ. ಪ್ರತಿ ತಿಂಗಳು ತುಂಬುವುದು ಸುಲಭ. ವಿದ್ಯುತ್ ಮಂಡಳಿಗೂ ಕೂಡ ಈ ಹೊಸ ಪದ್ಧತಿಯಿಂದ ನಷ್ಟವಾಗುತ್ತದೆ. ಯಾಕೆಂದರೆ ಗ್ರಾಹಕರಿಂದ ಬಿಲ್ಲಿನ ಹಣ ವಸೂಲಾದರೆ ದೈನಂದಿನ ಕೆಲಸಕ್ಕೆ ಆ ಹಣದ ಬಳಕೆಯಾಗುತ್ತೆ. 6 ತಿಂಗಳಿಗೊಮ್ಮೆ ಬಿಲ್ಲು ಮಾಡುವುದರಿಂದ ಮಂಡಳಿಗೆ ಬಡ್ಡಿಯ ಹಾನಿಯಾಗುತ್ತದೆ.

ಕೆ ಇ ಬಿ. ನೌಕರದಾರರು ತಮ್ಮ ಹಿತದ ಸಲುವಾಗಿ ಹೋರಾಡುತ್ತಿರುವಾಗ ಅದರಲ್ಲಿ ನಾಗರೀಕರ ಹಿತವೂ ಇದೆಂಬುದನ್ನು ಗ್ರಾಹಕರು ತಿಳಿದುಕೊಂಡಿಲ್ಲ. ಈಗ 1200 ಹೈಟೆನ್ಶನ್ ಬಳಕೆದಾರರಿಗಷ್ಟೇ ಬಿಲ್ ನೀಡಲಾಗುತ್ತಿದೆ. 25 ಲಕ್ಷಕ್ಕೂ ಮೇಲ್ಪಟ್ಟು ಬಳಕೆದಾರರಿಗೆ ಬಿಲ್ಲಿನ ಹಣ ಪಾವತಿಯಾಗದೇ ಇರುವುದರಿಂದ ಮಂಡಳಿಗೆ ಹೆಚ್ಚು ಹಾನಿ.

ಉಳಿತಾಯ ಯೋಜನೆಯ ಹೆಸರಿನಲ್ಲಿ ನೌಕರರಿಗೂ, ನಾಗರೀಕರಿಗೂ, ಮಂಡಳಿಗೂ ಅನ್ಯಾಯವೆಸಗುವ ಮಂಡಲಿ ಅಧಿಕಾರಿಗಳ ವರ್ತನೆ ಖಂಡನೀಯ. ಈ ಸಮಸ್ಯೆಯ ಪರಿಹಾರಕ್ಕೆ ಜನರೆಲ್ಲ ನೌಕರದಾರರ ಹೋರಾಟಕ್ಕೆ ಬೆಂಬಲ ಕೊಡಬೇಕು. ತಾವೂ ಹೋರಾಡಬೇಕು.

ಸಿ. ಪಿ. ಐ. (ಎಂ) ವಿರುದ್ಧ ಜೆಹಾದ್ ಹೂಡಲು ಮುಸ್ಲಿಂ ಮೂಲಭೂತವಾದಿಗಳ ಕರೆ

ಜಮ್ಮು ಮತ್ತು ಕಾಶ್ಮೀರವನ್ನು ಮುಖ್ಯ ಕೇಂದ್ರವನ್ನಾಗಿ ಮಾಡಿಕೊಂಡಿರುವ ಮುಸ್ಲಿಂ ಮೂಲಭೂತವಾದಿಗಳು ಕಮ್ಯೂನಿಸ್ಟರ ಅದರಲ್ಲೂ ಕೆಲವು ಸಿ.ಪಿ.ಐ. (ಎಂ) ನಾಯಕರುಗಳ ವಿರುದ್ಧ ಪವಿತ್ರಸಮರ (ಜೆಹಾದ್) ಹೂಡಲು ರಾಜ್ಯದ ಮುಸ್ಲಿಮರಿಗೆ ಕರೆ ನೀಡಿದ್ದಾರೆ. ಈ ಸಂಬಂದದಲ್ಲಿ ಸಿ.ಪಿ.ಐ. (ಎಂ) ಪೊಲಿಟ್‌ಬ್ಯೂರೋ ಸದಸ್ಯ ಕಾಂ। ಹರ್‌ಕಿಷನ್‌ಸಿಂಗ್ ಸುರ್ಜಿತ್ ಮುಖ್ಯ ಮಂತ್ರಿ ಷೇಕ್ ಅಬ್ದುಲ್ಲಾರಿಗೆ ಪತ್ರವೊಂದನ್ನು ಬರೆದು ಈ ಪ್ರತೀಗಾಮಿ ಶಕ್ತಿಗಳು ಪ್ರಕಟಿಸಿರುವ ಎರಡು ಕರಪತ್ರಗಳನ್ನು ಅವರ ಗಮನಕ್ಕೆ ತಂದಿದ್ದಾರೆ. ಪತ್ರದ ಸಾರಾಂಶ ಇಂತಿದೆ :

"ಬಹು ದಿನಗಳಿಂದ ಕಾಯಿಲೆ ಬಿದ್ದು ಚೇತರಿಸಿಕೊಳ್ಳುತ್ತಿರುವ ಈ ಸಮಯದಲ್ಲಿ ನಿಮಗೆ ತೊಂದರೆಕೊಡಲು ನಾನು ಇಚ್ಛಿಸಿದ್ದಿಲ್ಲ. ಆದರೆ ಪರಿಸ್ಥಿತಿ ತೀವ್ರವಾಗಿ ಹದಗೆಡುತ್ತಿದ್ದು ರಾಜ್ಯದ ಜನತೆಯ ಜಾತ್ಯಾತೀತ ಮತ್ತು ಪ್ರಜಾಸತ್ತಾತ್ಮಕ ಸಂಪ್ರದಾಯಗಳ ರಕ್ಷಣೆಗಾಗಿ ನೀವು ಮಧ್ಯ ಪ್ರವೇಶಿಸಲು ಸಾಧ್ಯವಾಗುವಂತೆ ಈ ಅಂಶಗಳನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ

ಬ್ರಿಟಿಷರಿಂದ ಬೆಂಬಲಿತನಾದ ಮಹಾರಾಜ ಹರಿಸಿಂಗ್‌ನ ದುರಾಡಳಿತ ವಿರುದ್ಧದ ಹೋರಾಟದಲ್ಲಿ ರಾಜ್ಯದಲ್ಲಿ ವಿವಿಧ ಕೋಮುಗಳ ನಡುವೆ ಐಕ್ಯತೆ ಮತ್ತು ಸಾಮರಸ್ಯ ಬೆಳೆಯಿತು. ಇದನ್ನು ಕದಡಲು ಪ್ರಯತ್ನಿಸುತ್ತಿರುವ ಜಮ್ಯೈತ್-ಇ-ಇಸ್ಲಾಮಿ ಮತ್ತು ಜಮ್ಯೈತ್-ಉಲ್-ತುಲ್ಬಾಗಳ ಚಟುವಟಿಕೆಗಳ ಬಗ್ಗೆ ಕಳೆದ ವರ್ಷ ನಿಮ್ಮ ಗಮನ ಸೆಳೆದಿದ್ದೆ.

ಧಾಳಿಯ ಮುಖ್ಯ ಗುರಿ

ಕಳೆದ ತಿಂಗಳು ನಾನು ಅಲ್ಲಿ ಇದ್ದಾಗ ಜಮ್ಯೈತ್ ಕಾರ್ಯಕರ್ತರು ಮತ್ತು ಮುಸ್ಲಿಂ ತೀವ್ರಗಾಮಿಗಳು ಇಸ್ಲಾಂ ರಕ್ಷಣೆಯ ಹೆಸರಿನಲ್ಲಿ ಅಮಾಯಕರ ಮೇಲೆ ಧಾಳಿ ಮಾಡುವುದನ್ನು ನಾನೇ ಕಂಡಿದ್ದೇನೆ. ಅವರ ಧಾಳಿಯ ಗುರಿ ನಮ್ಮ ಪಕ್ಷದ ಕಾರ್ಯಕರ್ತರು. ನನ್ನ ಕಣ್ಣೆದುರಿಗೆ ಎಸ್.ಎಫ್.ಐ. ಕಾರ್ಯಕರ್ತರನ್ನು ಥಳಿಸಿದ್ದಲ್ಲದೇ ಖಾನಿಹಾರ್‌ನಲ್ಲಿ ಎಸ್.ಎಫ್.ಐ ರಾಜ್ಯ ಸಮಿತಿಯ ಸಭೆ ನಡೆಯುತ್ತಿದ್ದ ಮನೆಯ ಮೇಲೆ ಧಾಳಿ ಮಾಡಲಿಚ್ಛಿಸಿದ್ದರು. ಮೊದಮೊದಲು ಪೋಲೀಸರು ಮೂಕ ಪ್ರೇಕ್ಷಕರಾಗಿದ್ದರು. ಈ ಹಿಂದೆಯೂ ನಮ್ಮ ಪಕ್ಷದ ಕಾರ್ಯಕರ್ತರ ಮನೆಗಳು ಧಾಳಿಗೀಡಾಗಿದ್ದು ಯಾವುದೇ ರಕ್ಷಣೆ ಸಿಗುತ್ತಿಲ್ಲ.

ಕಳೆದ ತಿಂಗಳು ನಮ್ಮ ರೈತ ಸಂಘಟನೆಯ ಅಧ್ಯಕ್ಷ ಅಬ್ದುಲ್ ಕಬೀರ್ ವಾನಿ ರೈತ ಸಂಘಟನೆಗಾಗಿ ಹಳ್ಳಿಗಳಲ್ಲಿ ಸಂಚರಿಸುತ್ತಿದ್ದಾಗ ಜಮ್ಯೈತ್ ನಮ್ಮ ಪಕ್ಷದವರ ಮೇಲೆ ಧಾಳಿ ಮಾಡಲು ಬಹಿರಂಗವಾಗಿ ಜನತೆಯನ್ನು ಪ್ರಚೋಧಿಸುತ್ತಿತ್ತು. ಇದಕ್ಕಾಗಿ ಜಮ್ಯೈತ್ ಇತ್ತೀಚಿಗೆ "ಕಮ್ಯೂನಿಸ್ಟ್ ವಿರೋಧಿ ಪಡೆ" ರಚಿಸಿದೆ. ಇವರು ಯಾರ ಮೇಲೆ ಧಾಳಿ ಮಾಡಬೇಕೆಂದು ಪಟ್ಟಿ ಮಾಡಿಕೊಂಡಿದ್ದಾರೆ. ಈ ಪ್ರತೀಗಾಮಿ ಸಂಘಟನೆಗಳು ಪ್ರಕಟಿಸಿರುವ ಎರಡು ಕರ ಪತ್ರಗಳನ್ನು ಕಳುಹಿಸುತ್ತಿದ್ದೇನೆ. ಅವುಗಳಿಂದ ಅವರು ಮಾಡುತ್ತಿರುವ ಕುತ್ಸಿತ ಅಪಪ್ರಚಾರ ಎಂತಹುವೆಂದು ತಿಳಿಯುತ್ತದೆ. ಒಂದು ಕರ ಪತ್ರದಲ್ಲಿ ಕಮ್ಯೂನಿಸ್ಟರು ಇಸ್ಲಾಂ ವಿರುದ್ಧ ಸಮರ ಹೂಡಿದ್ದಾರೆಂದು, ಇನ್ನೊಂದರಲ್ಲಿ, ಬುದ್ಧಿವಂತ ಜನತೆಯನ್ನು ಧರ್ಮದ ಹೆಸರಿನಲ್ಲಿ ದಾರಿ ತಪ್ಪಿಸಲು ಸಾಧ್ಯವಿಲ್ಲದ್ದರಿಂದ ಕಿಸಾನ್ ಸಭಾ ಸಂಘಟಿಸುವ ಮುಸುಕು ಹಾಕಿಕೊಂಡಿದ್ದಾರೆಂದು ಹೇಳಿದ್ದಾರೆ. ಇಂತಹ ಅಪಪ್ರಚಾರ ಕೋಮು ಸಾಮರಸ್ಯವನ್ನು ಹಾಳು ಮಾಡುತ್ತಿದೆ. ಇದನ್ನು ಕಮ್ಯೂನಿಸ್ಟರ ವಿರುದ್ಧದ ಧಾಳಿಯೆಂದು ಪರಿಗಣಿಸಬಾರದು. ಏಕೆಂದರೆ ಸದ್ಯದ ಪರಿಸ್ಥಿತಿಯಲ್ಲಿ ಅದು ರಾಜ್ಯದ ಜಾತ್ಯಾತೀತ ಪ್ರಜಾಸತ್ತಾತ್ಮಕ ಗುಣದ ವಿರುದ್ಧವಾಗಿದೆ.

ಪ್ರತ್ಯೇಕತಾವಾದಿ ಪ್ರಚಾರ

ಈ ಹಿನ್ನಲೆಯಲ್ಲಿ ಜಮ್ಯೈತ್-ಉಲ್-ತುಲ್ಬಾ ನಾಯಕ ಷೇಕ್ ತಾಜಮುಲ್ ಇಸ್ಲಾಂ, ದೇಶದ ಐಕ್ಯತೆಗೆ ಭಂಗ ತರುವಂತ ಭಾಷಣ ಮಾಡಿರುವುದನ್ನು ನಿಮ್ಮ ಗಮನಕ್ಕೆ ತರುತ್ತೇನೆ. ದಿನಾಂಕ 22-7-82ರ ಇಂಡಿಯನ್ ಎಕ್ಸ್‌ಪ್ರೆಸ್ ವರದಿ ಮಾಡಿರುವಂತೆ ಅವನು ಹೇಳಿದ್ದಾನೆ "ನಮ್ಮ ಉದ್ದೇಶ ಸಂವಿಧಾನದ 370ನೇ ಕಲಮನ್ನು ಉಳಿಸಿಕೊಳ್ಳುವುದರಲ್ಲಿ, ಕಾಶ್ಮೀರದಿಂದ ಭಾರತದ ಧಾಳಿಕೋರರನ್ನು ಹೊರ ಹಾಕುವುದು." 'ನಿಜವಾದ ಒಬ್ಬ ಮುಸ್ಲಿಂ ಜಾತ್ಯಾತೀತನಾಗಲಿ ಅಥವಾ ಸಮಾಜವಾದಿಯಾಗಲು ಸಾಧ್ಯವಿಲ್ಲ.' ಇದರಿಂದ ತಿಳಿಯುವುದೆಂದರೆ ಕಮ್ಯೂನಿಸ್ಟ್ ವಿರೋಧಿ ಧಾಳಿ ಅವರ ಎಲ್ಲ ಪ್ರತೀಗಾಮಿ ಚಳುವಳಿಗಳಿಗೊಂದು ನೆಪವಾಗಿದೆ. ಈ ವಿಚಾರಗಳನ್ನು ವ್ಯವಸ್ಥಿತವಾಗಿ ಜಮಾತ್‌ನ ನೂರಾರು ಸಂಸ್ಥೆಗಳ ಮೂಲಕ ಹರಡಲಾಗುತ್ತಿದೆ.

ನಮ್ಮ ಪಕ್ಷ ಯಾವುದೇ ಕೋಮಿನ ಧಾರ್ಮಿಕ ಭಾವನೆಗಳನ್ನು ಘಾಸಿಗೊಳಿಸುವ ಪ್ರಚಾರವನ್ನು ಎಂದೂ ಮಾಡಿಲ್ಲ. ವಾಸ್ತವವಾಗಿ ಮತೀಯ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಯನ್ನು ಪ್ರತಿಪಾದಿಸುತ್ತೇವೆ. ನಮ್ಮ ಸರ್ಕಾರ ಇರುವಲ್ಲಿ ಮತ್ತು ನಮ್ಮ ಚಳುವಳಿ ಪ್ರಭಾವಯುತವಾಗಿರುವ ಕಡೆ ಅಲ್ಪಸಂಖ್ಯಾತರಿಗೆ ಸಂಪೂರ್ಣ ರಕ್ಷಣೆಯಿದ್ದು ಕೋಮು ಸಾಮರಸ್ಯವಿದೆ. ಅಮೆರಿಕನ್ ಪರವಾದ ಅರಬ್ ರಾಷ್ಟ್ರಗಳ ಬೆಂಬಲಿತ ಈ ಸಂಘಟನೆಗಳು ಇಸ್ಲಾಂ ಹೆಸರಿನಲ್ಲಿ ಅಲ್ಪ ಸಂಖ್ಯಾತರು ನಮ್ಮ ಪಕ್ಷವನ್ನು ದ್ವೇಷಿಸುವಂತೆ ಪ್ರಚೋಧಿಸುತ್ತಿವೆ. ಆದರೆ ಹಿಂದೂ ಮತಾಂಧರೂ ಜಮಾತ್-ತುಲ್ಬಾಗಳ ಹಿಂಬಾಲಿಕರ ವಿರುದ್ಧ ಇದೇ ನಿಲುವನ್ನು ತಳೆದರೆ ಅವರನ್ನು ರಕ್ಷಿಸುವ ಶಕ್ತಿ ಯಾವುದೆಂದು ಅವರಿಗೆ ಮನವರಿಕೆಯಾಗಿಲ್ಲ !

ಅಭದ್ರತೆಗೆ ಪ್ರಯತ್ನ

ವಿಚ್ಛಿದ್ರಕಾರಿ ಶಕ್ತಿಗಳು ಈಶಾನ್ಯ ಭಾರತದಲ್ಲಿ ಪಂಜಾಬ್ ರಾಜ್ಯದ ಸರಹದ್ದಿನಲ್ಲಿ ಸಕ್ರಿಯವಾಗಿವೆ. ದಕ್ಷಿಣದಲ್ಲಿ ವಿರಾಟ್ ಹಿಂದೂ ಸಮ್ಮೇಳನದ ಧ್ವಜದಡಿಯಲ್ಲಿ ಕೆಲಸಮಾಡುತ್ತಿವೆ. ಜಮಾತ್‌ನ ಚಟುವಟಿಕೆಗಳು ಈ ಶಕ್ತಿಗಳನ್ನು ಪುಷ್ಟಿಕರಿಸುತ್ತವೆ. ಜಮ್ಮು ಕಾಶ್ಮೀರವನ್ನು ಕೇಂದ್ರವನ್ನಾಗಿಸಿಕೊಂಡಿರುವ ಜಮಾತ್-ತುಲ್ಬಾಗಳು ನಮ್ಮ ಪಕ್ಷದ ಕಾರ್ಯಕರ್ತರ ಪ್ರಾಣಕ್ಕೂ ಸಂಚಕಾರ ತಂದಿದ್ದಾರೆ. ಇದು ಫಲಿಸಿದ್ದೆ ಆದಲ್ಲಿ, ನೀವೂ ಪ್ರಮುಖ ಪಾತ್ರ ವಹಿಸಿದ ಸ್ವಾತಂತ್ರ್ಯ ಚಳುವಳಿಯಲ್ಲಿ ಬೆಳೆದು ಬಂದ ಉತ್ತಮ ಸಂಪ್ರದಾಯಗಳು ಬಲಿಯಾಗುತ್ತವೆ.

ಸಂಕುಚಿತ ಮನವಿಯಲ್ಲಿ

ಆದ್ದರಿಂದ ಕೇವಲ ನಮ್ಮ ಪಕ್ಷದ ನಾಯಕರು ಕಾರ್ಯಕರ್ತರಿಗೆ ರಕ್ಷಣೆ ಕೊಡುವಂತೆ ಸಂಕುಚಿತ ಮನವಿಮಾಡಿಕೊಳ್ಳದೆ ನಾವೆಲ್ಲರೂ ಎತ್ತಿಹಿಡಿಯುವ ಮೌಲ್ಯಗಳಾದ ಜಾತ್ಯಾತೀತತೆ ಪ್ರಜಾಪ್ರಭುತ್ವಗಳನ್ನು ರಕ್ಷಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದಕ್ಕಾಗಿ ಈ ಸಂಘಟನೆಗಳ ಸಂಚನ್ನು ಬಯಲುಗೊಳಿಸಿ ಜನತೆಯಿಂದ ಪ್ರತ್ಯೇಕಗೊಳಿಸಬೇಕು. ಪರಿಸ್ಥಿತಿಯನ್ನರಿತು ಸಕಾಲದಲ್ಲಿ ಕ್ರಮ ಕೈಗೊಳ್ಳದಿದ್ದರೆ ನಾವೆಲ್ಲರೂ ಭಾರೀ ಬೆಲೆಯನ್ನು ತರಬೇಕಾದೀತು.

ಕಾಶ್ಮೀರದಲ್ಲಿ ಜಾತ್ಯಾತೀತತೆ ಪ್ರಜಾಪ್ರಭುತ್ವಗಳನ್ನು ರಕ್ಷಿಸುವಲ್ಲಿ ನಿಮ್ಮ ತುರ್ತು ಮಧ್ಯಪ್ರವೇಶಿಕೆಯನ್ನು ನಿರೀಕ್ಷಿಸುತ್ತಾ ಈ ಪತ್ರ ಬರೆಯುತ್ತಿದ್ದೇನೆ."

●

ಆಂಧ್ರ ಪ್ರದೇಶ ಸರಕಾರಕ್ಕೆ ಪ್ರಶ್ನೆ

"ಇನ್ನೆಷ್ಟು ಕೊಲೆಗಳ ಯೋಜನೆ ನಿಮ್ಮದು?"

ವಾರಂಗಲ್ ಜಿಲ್ಲೆಯ ನರಸಸಂಪೇಟ್‌ನ ಸುತ್ತಮುತ್ತಲು ಕಳೆದ 30 ತಿಂಗಳಲ್ಲಿ 45 ಸಿ. ಪಿ. ಐ. (ಎಂ) ಕಾರ್ಯಕರ್ತರ ಕೊಲೆಯಾಗಿದೆ. ಈ ಎಲ್ಲದರ ಬಗ್ಗೆ ಮೊದಲೇ ಕಾನೂನು ವ್ಯವಸ್ಥೆಯ ಪಾಲಕರೆನ್ನುವವರಿಗೆ ಮುನ್ನೆಚ್ಚರಿಕೆ ನೀಡಿದ್ದರೂ ಏನೂ ಉಪಯೋಗವಾಗಲಿಲ್ಲ. ವಿಭಾಗೀಯ ಕಿಸಾನ್ ಸಭಾದ ಅಧ್ಯಕ್ಷ ಗಟ್ಟು ರಾಮಲಿಂಗರೆಡ್ಡಿಯವರ ಕೊಲೆಯಾಗುವ ಮೂರು ತಿಂಗಳ ಮೊದಲೇ ಇಂತಹ ಪ್ರಯತ್ನಗಳ ಬಗ್ಗೆ ಅಧಿಕಾರಿಗಳ ಗಮನ ಸೆಳೆಯಲಾಗಿತ್ತು. ಇನ್ನೊಬ್ಬ ಸಂಗಾತಿ ಲಿಂಗಾರೆಡ್ಡಿಯವರ ಕೊಲೆಯಾಗುವ ಕೇವಲ ಹತ್ತು ದಿನಗಳ ಮೊದಲಷ್ಟೇ ಕಾಂ। ಸುಂದರಯ್ಯ ಮುಖ್ಯ ಮಂತ್ರಿಯವರನ್ನು ಭೇಟಿಯಾಗಿ ಪೋಲೀಸ್ ರಕ್ಷಣೆ ಕೋರಿದ್ದರು. ವಾರಂಗಲ್ ಮಾತ್ರವಲ್ಲ ಪಕ್ಕದ ನಲಗೊಂಡ ಜಿಲ್ಲೆಯಲ್ಲಿಯೂ ಇದೇ ನಡೆಯುತ್ತಿದೆ. ಕಳೆದೆರಡು ವರ್ಷಗಳಲ್ಲಿ ಹಲವು ಸಂಗಾತಿಗಳು ಗೂಂಡಾಗಳ ಆಕ್ರಮಣಗಳಿಗೆ ಬಲಿಯಾಗಿದ್ದಾರೆ ಅಥವಾ ಅಂಗವಿಕಲರಾಗಿದ್ದಾರೆ

ಇತ್ತೀಚಿಗೆ ಕಾಂ॥ ಸುಂದರಯ್ಯನವರ ಚುನಾವಣಾ ಕ್ಷೇತ್ರಕ್ಕೆ ಸೇರಿದ ತೆಲಾಪ್ರೋತಹಳ್ಳಿಯ ಬಿ. ರಾಮಕೃಷ್ಣ ರೆಡ್ಡಿಯವರ ಮೇಲೆ ಹಾಡುಹಗಲೇ ಭೀಕರ ಆಕ್ರಮಣ ನಡೆಸಿ ಅವರ ಕೊಲೆ ಮಾಡಲಾಯಿತು. ಪೋಲೀಸರಿಗೆ ಮೊದಲೇ ದೂರು ಕೊಟ್ಟಿದ್ದರೂ ಏನೂ ಮಾಡಲಿಲ್ಲ. ಆದರೆ ಸಾರ್ವಜನಿಕ ಅಭಿಪ್ರಾಯದ ಒತ್ತಡ ಹೆಚ್ಚಾದಾಗ ಅವರು ಕೆಲವು ಕ್ರಮ ತಗೊಳ್ಳಬೇಕಾಯಿತು. ಕೆಲವು ಕಾಂಗ್ರೆಸ್ (ಐ) ನಾಯಕರ ಮನೆಗಳನ್ನು ಪೋಲೀಸರು ಶೋಧಿಸಬೇಕಾಗಿ ಬಂದಾಗ ಅವರ ಮನೆಗಳಲ್ಲಿ ಕೈಬಾಂಬುಗಳು ಇರುವುದು ಕಂಡು ಬಂತು. ಆದರೆ ಈ ವಿಷಯ ಇಷ್ಟು ಸ್ಪಷ್ಟವಿದ್ದರೂ ಬೇರೇನೂ ನಡೆಯಲಿಲ್ಲ.

ಆಳುವ ಕಾಂಗ್ರೆಸ್ ಪಕ್ಷ ನಕ್ಸಲೀಯರೆಂದು ತಮ್ಮನ್ನು ಕರೆಸಿಕೊಳ್ಳುವ ವಿವಿಧ ನಮೂನೆಯ ಗುಂಪುಗಳು, ಕುಪ್ರಸಿದ್ಧ ಸಮಾಜಘಾತಕ ಶಕ್ತಿಗಳು ಹಾಗೂ ಬಾಡಿಗೆ ಗೂಂಡಾಗಳ ಸಹಕಾರ ಪಡೆದು ಈ ರಾಜಕೀಯ ಕೊಲೆಗಳನ್ನು ಸಂಘಟಿಸುತ್ತಿದೆ. ಆದ್ದರಿಂದಲೇ ವಿಧಾನ ಸಭೆಯಲ್ಲಿ ಸಿ ಪಿ ಐ (ಎಂ) ಗುಂಪಿನ ಉಪ ನಾಯಕ ಕಾಂ। ಓಂಕಾರ್ ಸರಕಾರವನ್ನು ನೇರವಾಗಿ ಪ್ರಶ್ನಿಸಿದರು— "ಇನ್ನೆಷ್ಟು ಕೊಲೆ ನಡೆಸಲು ಯೋಜನೆ ಹಾಕಿಕೊಂಡಿದ್ದೀರೆಂಬುದನ್ನು ನೀವೇಕೆ ನಮಗೆ ಹೇಳಬಾರದು? ಇದರಿಂದ ನಿಮ್ಮ ಪಟ್ಟಿಯಲ್ಲಿರುವ ನಾವೆಲ್ಲಾ ಬಂದು ನಮ್ಮ ಕುತ್ತಿಗೆಯೊಡ್ಡಲು ಅನುಕೂಲವಾಗಬಹುದಲ್ಲಾ !"

ಆಂಧ್ರ ಪ್ರದೇಶದಲ್ಲಿ ಬಹಳ ಹಿಂದಿನಿಂದಲೂ ಕಾಂಗ್ರೆಸ್ (ಐ) ಪಕ್ಷ ಹಾಗೂ ರಾಜ್ಯ ಸರಕಾರ ಭೂಮಾಲಿಕರ ಕಪಿ ಮುಷ್ಟಿಯಲ್ಲಿದೆ ಈ ಭೂಮಾಲಿಕರ ಮಕ್ಕಳು, ಅಳಿಯಂದಿರು ಎಲ್ಲರೂ ರಾಜ್ಯದ ಅಧಿಕಾರಶಾಹಿಯಲ್ಲಿ, ಐ.ಎ.ಎಸ್., ಐ.ಪಿ.ಎಸ್. ಹಾಗೂ ನ್ಯಾಯಾಂಗದ ವಿವಿಧ ಹಂತಗಳಲ್ಲಿ ಭದ್ರವಾಗಿ ಬೇರೂರಿದ್ದಾರೆ. ಜತೆಗೆ ಅಮಾನುಷ ಕೃತ್ಯ ನಡೆಸುವುದನ್ನು ಬಿಟ್ಟು ಬೇರೇನೂ ತಿಳಿಯದ ಸಮಾಜಘಾತಕ ಶಕ್ತಿಗಳು ಪಂಚಾಯಿತಿಗಳ, ಜಿಲ್ಲಾ ಪರಿಷತ್ತುಗಳ ಅಧ್ಯಕ್ಷರು, ಎಂ.ಎಲ್.ಎ., ಎಂ.ಪಿ.ಗಳಾಗಿದ್ದಾರೆ. ಹೀಗೆ ಈ ಭೂಮಾಲಿಕ ರಾಜಕಾಣಿಗಳು ಅತೀ ನಿಕೃಷ್ಟ ಕೃತ್ಯಗಳನ್ನು ನಡೆಸಿಯೂ ಸುಲಭದಲ್ಲಿ ಪಾರಾಗಲು ಪ್ರಭುತ್ವಯಂತ್ರ ಬೆಂಬಲವಿರುವಾಗ ರಾಜಕೀಯ ಕೊಲೆಗಳು ಇವರಿಗೆ ಒಂದು ಸುಲಭದ ಅಸ್ತ್ರವಾಗಿಬಿಟ್ಟರೆ ಆಶ್ಚರ್ಯವೇನು ?

ಈ ಕೊಲೆಗಳಿಗೂ ಗ್ರಾಮಾಂತರದಲ್ಲಿ ಭೂಮಾಲಿಕರ ದಬ್ಬಾಳಿಕೆಗೂ ಒಂದಿಲ್ಲೊಂದು ರೀತಿಯಲ್ಲಿ ಸಂಬಂಧವಿದೆ. ಜಮೀನ್ದಾರರ ದಾಳಿಗೆ ತುತ್ತಾದ ಹಳ್ಳಿಯ ಬಡವರ ರಕ್ಷಣೆಗೆ ಧಾವಿಸುವ ಸಿ ಪಿ ಐ. (ಎಂ) ಕಾರ್ಯಕರ್ತರು ಈ ಗೂಂಡಾಗಳ ಪಟ್ಟಿ ಸೇರಿಬಿಡುತ್ತಾರೆ.

○

ಕಾಂ। ಕೃಷ್ಣಪ್ಪಶೆಟ್ಟಿ ನಿಧನ

ಸಿ. ಪಿ. ಐ. (ಎಂ) ಬಂಡಾರಿಬೆಟ್ಟು (ಬಂಟ್ವಾಳ) ಶಾಖೆಯ ಸದಸ್ಯರಾಗಿದ್ದ ಕಾಂ। ಕೃಷ್ಣಪ್ಪಶೆಟ್ಟಿಯವರು 12-8-82ರಂದು ನಿಧನರಾದ ವಾರ್ತೆ ಬಂದಿದೆ. ಅವರು ಕೆಲಸಮಯದಿಂದ ಕಾಯಿಲೆಯಿಂದ ಬಳಲುತ್ತಿದ್ದರು.

ಸಿ. ಪಿ.ಐ. (ಎಂ) ಬಂಟ್ವಾಳ ತಾಲ್ಲೂಕು ಸಮಿತಿಯು ಕಾಂ। ಕೃಷ್ಣಪ್ಪಶೆಟ್ಟರ ನಿಧನಕ್ಕೆ ತೀವ್ರ ಶೋಕ ವ್ಯಕ್ತಪಡಿಸಿದೆ.

ನೆರೆ ಹೊರೆ

ಬಿಹಾರದ ಪತ್ರಿಕಾ ಮಸೂದೆಗೆ ಜನತೆಯ ಪ್ರತಿಭಟನೆ

ಮಿಶ್ರಾ ಬೆಪ್ಪುಗೊಂಡಿದ್ದಾರಂತೆ !

ಪತ್ರಿಕಾ ರಂಗ ವಿರೋಧಿಯಾದ ಬಿಹಾರ ಪತ್ರಿಕಾ ಮಸೂದೆಗೆ ಬಿಹಾರದ ಪತ್ರಿಕಾ ರಂಗದಿಂದ ಮಾತ್ರವಲ್ಲ ದೇಶಾದ್ಯಂತ ಎಲ್ಲಾ ರಂಗಗಳಿಂದ ಏಕೆ ಪ್ರಬಲ ಪ್ರತಿಭಟನೆ ಬರುತ್ತಿದೆಯೆಂದು ತಿಳಿಯಲಾರದೆ ಮುಖ್ಯ ಮಂತ್ರಿ ಜಗನ್ನಾಥ ಮಿಶ್ರಾ ಬಹಳ ಗಲಿಬಿಲಿಗೊಂಡಿದ್ದಾರಂತೆ. ಬಹುಶಃ ಅವರು ಪೆದ್ದರಿರಬೇಕು, ಇಲ್ಲವೇ ಮೂರ್ಖರಿರಬೇಕು. ಇಲ್ಲವಾದರೆ ಕಾಂಗ್ರೆಸ್(ಐ)ನ ಭ್ರಷ್ಟಾಚಾರ, ಕುಕೃತ್ಯಗಳು ಸಾರ್ವಜನಿಕರ ಗಮನಕ್ಕೆ ಬಾರದಂತೆ ನೋಡಿಕೊಳ್ಳಲು ಬಿಹಾರದ ಅಸೆಂಬ್ಲಿಯಲ್ಲಿ ಪಾಸು ಮಾಡಿಕೊಂಡ ಈ ಪತ್ರಿಕಾ ವಿರೋಧೀ ಮಸೂದೆಯನ್ನು ಪತ್ರಿಕಾ ಕರ್ತರು ಮಾತ್ರವಲ್ಲದೆ ಸಂಪೂರ್ಣ ಜನತೆ ಆಸಕ್ತಿವಹಿಸಲು ಏನು ಕಾರಣವೆಂಬುದು ಅವರಿಗೆ ಅರ್ಥವಾಗಬೇಕಿತ್ತು. ಅವರಿಗೆ ಅರ್ಥವಾಗುವುದೋ ಬಿಡುವುದೋ ಬಿಹಾರದ ಜನತೆ ಮತ್ತು ದೇಶದ ಸಂಪೂರ್ಣ ಜನತೆ ಈ ಮಸೂದೆಯ ಹಿಂದೆ ಅಡಗಿರುವ ಸರ್ವಾಧಿಕಾರೀ ಪ್ರವೃತ್ತಿ ಎಷ್ಟೊಂದು ಅಪಾಯಕಾರಿಯೆಂಬುದನ್ನು ಅರ್ಥಮಾಡಿಕೊಂಡಿದ್ದಾರೆ, ಈ ಪ್ರವೃತ್ತಿಗೆ ತಡೆಯೊಡ್ಡಲೇಬೇಕು ಎಂದು ನಿರ್ಧರಿಸಿದ್ದಾರೆ ಎಂಬುದಂತೂ ಈಗ ಸ್ಪಷ್ಟವಾಗುತ್ತಿದೆ.

ಬಿಹಾರದ ಪತ್ರಿಕಾಕರ್ತರ ಜಂಟೀ ಕ್ರಿಯಾ ಸಮಿತಿ ಈ ಮಸೂದೆಯ ವಿರುದ್ಧ ಆಂದೋಳನದ ಮೊದಲಹಂತವನ್ನು ಯಶಸ್ವಿಯಾಗಿ ದಾಟಿ ಈಗ ಎರಡನೇ ಹಂತ ತಲುಪಿದೆ. ಇದರಲ್ಲಿ ಅವರಿಗೆ ಶಿಕ್ಷಣರಂಗದಿಂದ, ಕಾರ್ಮಿಕರಂಗದಿಂದ, ವಿದ್ಯಾರ್ಥಿಗಳಿಂದ, ಯುವಕರಿಂದ ಸಂಪೂರ್ಣ ಬೆಂಬಲ ದೊರೆತಿದೆ. ಬೇರೆ ರಾಜ್ಯಗಳ ಪತ್ರಕರ್ತರು, ಬುದ್ಧಿಜೀವಿಗಳು, ಅಧ್ಯಾಪಕರು, ವಿದ್ಯಾರ್ಥಿಗಳು ಹೀಗೆ ಎಲ್ಲರಿಂದಲೂ ಸಂಪೂರ್ಣ ಬೆಂಬಲ ವ್ಯಕ್ತಪಟ್ಟಿದೆ. ಕರ್ನಾಟಕವೂ ಸೇರಿದಂತೆ ಎಲ್ಲಾ ರಾಜ್ಯಗಳಲ್ಲಿ ಮಸೂದೆಯ ವಿರುದ್ಧ ವ್ಯಾಪಕ ಪ್ರತಿಭಟನೆ, ಮೆರವಣಿಗೆ, ಸಭೆ ನಡೆಯುತ್ತಿವೆ. ಮಿಶ್ರಾರನ್ನು ಅತ್ಯಂತ ಗಲಿಬಿಲಿಗೊಳಿಸುವ ಸಂಗತಿಯೆಂದರೆ ಈ ಪ್ರತಿಭಟನಾಕಾರರ ಸರಣಿಯಲ್ಲಿ ಬಿಹಾರ ರಾಜ್ಯದ ಸಚಿವಾಲಯದ ಅಧಿಕಾರಿಗಳ ಸಂಘವೂ ಸೇರಿಕೊಂಡಿದೆ. ಆಗಸ್ಟ 12 ರಂದು ಸಂಘದ ಕೇಂದ್ರ ಕಾರ್ಯಕಾರೀ ಸಮಿತಿ ಮಸೂದೆಯನ್ನು ಖಂಡಿಸಿ ಅದನ್ನು ರದ್ದುಗೊಳಿಸಬೇಕೆನ್ನುವ ಪ್ರಜಾಪ್ರಭುತ್ವವಾದೀ ಚಳುವಳಿ ಸೇರಲು ನಿರ್ಧರಿಸಿದೆ. ಆಗಸ್ಟ 21 ರಂದು ಪ್ರದರ್ಶನ ನಡೆಸುತ್ತಿದ್ದ ಪತ್ರಕರ್ತರ ಮೇಲೆ ಲಾಠೀ ಚಾರ್ಜು ನಡೆಸಿರುವುದನ್ನು ಪ್ರತಿಭಟಿಸಿ 23 ರಂದು ಯಶಸ್ವೀ ಪಾಟ್ನಾ ಬಂದ್ ಆಚರಿಸಲಾಯಿತು.

ಇನ್ನೂ ಒಂದು ಗಮನಾರ್ಹ ಅಂಶವೆಂದರೆ ಬಿಹಾರದ ಕಾಂಗ್ರೆಸ್(ಐ)ನಲ್ಲೇ ಈ ಮಸೂದೆಯ ಬಗ್ಗೆ ತೀವ್ರ ವಿರೋಧ ಬೆಳೆಯುತ್ತಿದೆ. ಈ ಮಸೂದೆಯಿಂದಾಗಿ ಬಿಹಾರದಲ್ಲಿ ಕಾಂಗ್ರೆಸ್ (ಐ) ನಿರ್ನಾಮವಾದಂತೆಯೇ ಎಂದು ಪಾಟ್ನಾದ ಕಾಂಗ್ರೆಸ್ (ಐ) ಸಮಿತಿಯ ಕಾರ್ಯದರ್ಶಿ ಹಾಗೂ ಇತರ ಬಹಳ ಕಾಂಗ್ರೆಗಳ ಅಭಿಪ್ರಾಯವಂತೆ ! ಪಕ್ಷದ ರಾಜ್ಯಗಳಾದ ಉತ್ತರ ಪ್ರದೇಶ ಹಾಗೂ ಮಧ್ಯ ಪ್ರದೇಶದ ಮುಖ್ಯ ಮಂತ್ರಿಗಳು ಯಾರೂ ಕೇಳದಿದ್ದರೂ ಅವಸರವಸರವಾಗಿ ತಮ್ಮ ರಾಜ್ಯಗಳಲ್ಲಿ ಇಂತಹ ಮಸೂದೆಯ ಅಗತ್ಯವಿಲ್ಲವೆಂದು ಹೇಳಲಾರಂಭಿಸಿದ್ದಾರೆ.

ತುರ್ತುಪರಿಸ್ಥಿತಿಯಲ್ಲಿ ಮಾಡಿದಂತೆ ಇನ್ನೊಮ್ಮೆ ಪತ್ರಿಕೆಗಳ ಕತ್ತು ಹಿಸುಕುವ ಕೆಲಸ ಕೇಂದ್ರದಲ್ಲಿ ಮಾಡುವುದು ಕಷ್ಟಸಾಧ್ಯವಾದ್ದರಿಂದ ರಾಜ್ಯಗಳಲ್ಲಿ ಇದನ್ನು ಜ್ಯಾರಿಗೆ ತಂದು ಕ್ರಮೇಣ ದೇಶವ್ಯಾಪಿಗೊಳಿಸಬಹುದೆಂದು ಬಹುಶಃ ಲೆಕ್ಕಾಚಾರ ಹಾಕುತ್ತಿದ್ದ ಕಾಂಗ್ರೆಸ್ (ಐ)ನ ಕೇಂದ್ರ ನಾಯಕತ್ವ ಕೂಡಾ ಈಗ ಪ್ರತಿಭಟನೆಯ ಪ್ರಮಾಣ ಕಂಡು ಹಿಂದೆ ಮುಂದೆ ನೋಡಲಾರಂಭಿಸಿದೆ. ಮಸೂದೆ ಮಂಡಿಸುವ ಮೊದಲು ತಮ್ಮನ್ನು ಕೇಳಿರಲಿಲ್ಲವೆಂದು ಗೊಣಗುತ್ತಿದ್ದಾರಂತೆ ಅವರು.

ಬಿಹಾರಿನಲ್ಲಿ ಕುಖ್ಯಾತ ಡಕಾಯಿತ ಮಲ್ಖನ್ ಸಿಂಗ್ ಶರಣಾಗತಿಯನಂತರ ಈಗ ಜಗನ್ನಾಥ ಮಿಶ್ರಾರ ಸರದಿ ಬಂದಿದೆ ಎಂದು ಓದುಗನೊಬ್ಬ ಒಂದು ವಾರಪತ್ರಿಕೆಯಲ್ಲಿ ಅಭಿಪ್ರಾಯಪಟ್ಟಿದ್ದಾನೆ. ಆಂದೋಳನ ಆರಂಭಿಸಿದ ಬಿಹಾರದ ಪತ್ರಕರ್ತರು, ಅವರ ಬೆಂಬಲಕ್ಕೆ ನಿಂತ ಬಿಹಾರದ ಜನತೆ, ದೇಶದ ಪತ್ರಿಕಾಕರ್ತರು ಹಾಗೂ ಸಂಪೂರ್ಣ ಜನತೆಯ ಪ್ರತಿಭಟನೆಯ ಶಕ್ತಿ ಇದರಿಂದ ತಿಳಿಯುತ್ತದೆ.

●

ಕೇರಳದ ಗೃಹಮಂತ್ರಿ ಮತ್ತು ಎನ್ ಎಸ್.ಎ.

ಅಂದು ಪ್ರಬಲ ವಿರೋಧ - ಇಂದು ಅದೇ ಬೇಕು

ಕೇರಳದ ಗೃಹ ಮಂತ್ರಿ ವಾಯಲಾರ್ ರವಿಯವರು ಕಾಂಗ್ರೆಸ್ (ಐ) ನೇತೃತ್ವದ ಸರಕಾರ ಅಧಿಕಾರ ವಹಿಸಿಕೊಂಡ ನಂತರ ಸ್ವಲ್ಪ ಸಮಯದವರೆಗೆ ಕೇರಳದಲ್ಲಿ ರಾಜಕೀಯ ಕೊಲೆ ನಡೆಯುತ್ತಲೇ ಇಲ್ಲ ಎಂದು ಹೇಳುತ್ತಾ ಇದ್ದವರು ಈಗ ರಾಜಕೀಯ ಕೊಲೆಯ ಬಗ್ಗೆ ಮಾತನಾಡುತ್ತಿದ್ದಾರೆ. ರಾಷ್ಟ್ರೀಯ ಭದ್ರತಾ ಶಾಸನ (NSA) ಉಪಯೋಗಿಸುತ್ತೇವೆ ಎಂದು ಬೆದರಿಸುತ್ತಿದ್ದಾರೆ. ಈ ಗೃಹ ಮಂತ್ರಿಗಳ ಪಕ್ಷ, ಅಂತೋಣಿ ಕಾಂಗ್ರೆಸ್ ಎಡ–ಪ್ರಜಾಪ್ರಭುತ್ವ ರಂಗದ ಹಾಗೂ ಅದರ ಸರಕಾರದ ಅಂಗವಾಗಿದ್ದಾಗ N.S.A. ಯನ್ನು ಪ್ರಬಲವಾಗಿ ವಿರೋಧಿಸಿತ್ತು. ಈಗ ಅದನ್ನೇ ಉಪಯೋಗಿಸುತ್ತೇವೆ ಎಂದು ಗುಟುರು ಹಾಕುತ್ತಿದೆ. ಇದರಲ್ಲಿ ಆಶ್ಚರ್ಯವೇನಿಲ್ಲ. ಕಾಂಗ್ರೆಸ್ (ಐ)ನ ನೇತೃತ್ವ ಒಪ್ಪಿಕೊಂಡ ಮೇಲೆ ಇಂತಹ ತಿಪ್ಪರಲಾಗ ತೀರಾ ಸ್ವಾಭಾವಿಕ ತಾನೇ ?

ಈ ಮಧ್ಯೆ ಸಿ.ಪಿ.ಐ.(ಎಂ) ಹಾಗೂ ಎಡ - ಪ್ರಜಾಪ್ರಭುತ್ವರಂಗದ ಇತರ ಪಕ್ಷಗಳ ಕಾರ್ಯಕರ್ತರ ಮೇಲೆ ಕಾಂಗ್ರೆಸ್ (ಐ) ಹಾಗೂ ಆರ್. ಎಸ್. ಎಸ್.ಗಳ ಗೂಂಡಾದಾಳಿ ಹಾಗೇ ಮುಂದುವರಿಯುತ್ತಿದೆ. ಕಾಂಗ್ರೆಸ್ (ಐ) ಹಾಗೂ ಆರ್.ಎಸ್.ಎಸ್.ನವರ ಮನೆಗಳಲ್ಲಿ ಬಾಂಬ್‌ಗಳು ದೊರೆತರೂ ಅವರ ಮೇಲೆ ಯಾವ ಕ್ರಮವೂ ಇಲ್ಲ. ಇತ್ತೀಚೆಗೆ ಕಣ್ಣಾನೂರು ಜಿಲ್ಲೆಯಲ್ಲಿ ತನ್ನ ಮನೆಯಲ್ಲಿ ಬಾಂಬು ತಯಾರಿಸುತ್ತಿದ್ದಾಗ ಸ್ಫೋಟವುಂಟಾಗಿ ಒಬ್ಬ ಆರ್.ಎಸ್.ಎಸ್.ನ ಕಾರ್ಯಕರ್ತ ಪ್ರಾಣ ಕಳಕೊಂಡಿದ್ದಾನೆ. ಆದರೂ ಸುಮ್ಮನಿರುವ, ಹರಿಜನರು ಹಾಗೂ ಅಲ್ಪಸಂಖ್ಯಾತರ ಮೇಲೆ ಸತತ ದಾಳಿ ನಡೆಸಿದರೂ ಅದನ್ನು ಖಂಡಿಸಲು ಬಾಯಿಯೇ ಬರದ ವಾಯಲಾರ್ ರವಿಯವರಿಗೆ ಸ್ವಾಭಾವಿಕವಾಗಿಯೇ ಆರ್.ಎಸ್.ಎಸ್.ನವರಿಂದ ಉತ್ತಮ ಆಡಳಿತಗಾರರೆಂಬ ಸರ್ಟಿಫಿಕೇಟ್ ಬೇರೆ ಸಿಕ್ಕಿದೆ ! ಕಾಂಗ್ರೆಸ್ (ಐ) ನೇತೃತ್ವದ ಸರಕಾರ ಆರ್ ಎಸ್.ಎಸ್.ನ ಗೂಂಡಾಗಿರಿಗೆ ಸಂಪೂರ್ಣ ಬೆಂಬಲ ಕೊಟ್ಟಿದೆಯೆಂಬುದಕ್ಕೆ ಇದೊಂದು ನಿದರ್ಶನ. ಆದ್ದರಿಂದ ಇಂತಹ ಸಮಾಜ ವಿರೋಧಿಗಳ ಮೇಲೆ NSA ಪ್ರಯೋಗಿಸುವ ಯೋಜನೆ ವಾಯಲಾರ್ ರವಿಯವರಿಗೆ ಇಲ್ಲ. ಕಾರ್ಮಿಕವರ್ಗ ಹಾಗೂ ಇತರ ದುಡಿಯುವ ಜನತೆ ಸರಕಾರದ ಜನವಿರೋಧಿ ಧೋರಣೆಗಳನ್ನು ಹೆಚ್ಚೆಚ್ಚು ವಿರೋಧಿಸುತ್ತಿರುವುದರಿಂದ ಇದಕ್ಕೆ ವಿರೋಧ ಪಕ್ಷಗಳು ಬೆಂಬಲಕೊಡುತ್ತಿರುವುದರಿಂದಷ್ಟೇ ರವಿಯವರಿಗೆ NSA ಯ ನೆನಪಾಗುತ್ತಿದೆ.

ಮಧ್ಯ ಪ್ರದೇಶ

ಹತಾಶೆಗೊಂಡ ಆರೆಸ್ಸೆಸ್ಸಿಗರ ಗೂಂಡಾಗಿರಿ

ಮಧ್ಯಪ್ರದೇಶದ ಮೊರೇನಾ ಜಿಲ್ಲೆಯಲ್ಲಿ ಈ ವರ್ಷ ಕಾಲೇಜುಗಳ ಆರಂಭವಾದಾಗ ಎಸ್.ಎಫ್.ಐ. ಇತರ ಕೆಲವು ವಿದ್ಯಾರ್ಥಿ ಸಂಘಟನೆಗಳೊಡನೆ ಸೇರಿಕೊಂಡು ಕೆಲವು ಜನಪ್ರಿಯ ಬೇಡಿಕೆಗಳಿಗಾಗಿ ಹೋರಾಟ ನಡೆಸಿ ವಿದ್ಯಾರ್ಥಿ ಸಮುದಾಯದಲ್ಲಿ ಬಹು ಸಂಖ್ಯೆಯಲ್ಲಿ ಬೆಂಬಲ ಗಳಿಸಿತು. ಇದರಲ್ಲಿ ತನ್ನ ನಿಲುವಿನಿಂದಾಗಿ ದೂರವಿರಬೇಕಾಗಿ ಬಂದ ಅಖಿಲ ಭಾರತ ವಿದ್ಯಾರ್ಥಿ ಪರಿಷತ್‌ನ ಜಿಲ್ಲಾ ಸಮಿತಿಯ ಬಹು ಸಂಖ್ಯೆಯ ಸದಸ್ಯರು ಅದನ್ನು ಬಿಟ್ಟು ಎಸ್.ಎಫ್.ಐ. ಸೇರಿದರು. ಇದರಿಂದ ಎ.ಬಿ.ವಿ.ಪಿ. ಹಾಗೂ ಆರ್.ಎಸ್.ಎಸ್. ನವರು ಕುಪಿತಗೊಂಡರು. ಗಾಯದ ಮೇಲೆ ಬರೆ ಎಳೆದಂತೆ ಎಸ್.ಎಫ್.ಐ. ನೇತೃತ್ವದಲ್ಲಿ ನಡೆದ ಕಾಪಿ ಹೊಡೆಯುವುದರ ವಿರುದ್ಧವಾದ ಆಂದೋಲನದ ಪರಿಣಾಮವಾಗಿ ಎ.ಬಿ.ವಿ.ಪಿ.ಯ ಸ್ಥಳೀಯ ಮುಖ್ಯಸ್ಥನೇ ಕಾಪಿ ಮಾಡುತ್ತಿರುವಾಗ ಸಿಕ್ಕಿಹಾಕಿಕೊಂಡ. ಇಲ್ಲಿಯ ಒಬ್ಬ ಕುಪ್ರಸಿದ್ಧ ಜಮೀನುದಾರ ಹರಿಜನರ ಮೇಲೆ ಅವರು ಬಿ.ಜೆ.ಪಿ.ಗೆ ಸೇರಲು ನಿರಾಕರಿಸಿದ ಕಾರಣ ಹಲ್ಲೆ ನಡೆಸಿದಾಗ ಹರಿಜನರ ಪ್ರತಿಭಟನಾ ಹೋರಾಟಕ್ಕೆ ಎಸ್. ಎಫ್. ಐ. ನವರು ಬೆಂಬಲ ಕೊಟ್ಟರು. ಇವೆಲ್ಲಾ ಸೇರಿ ಎಸ್.ಎಫ್.ಐ. ಬಗ್ಗೆ ತೀವ್ರ ಕುಪಿತಗೊಂಡ ಎ.ಬಿ.ವಿ.ಪಿ. — ಆರ್. ಎಸ್. ಎಸ್. ಗೂಂಡಾಗಳು ಸಮಾಜ ಘಾತಕ ಕೆಲಸ ನಡೆಸಲಾರಂಭಿಸಿದರು. ಆಗಸ್ಟ 6 ರಂದು ಇವರು ಒಂದು ಗೂಂಡಾಪಡೆ ಎ.ಬಿ.ವಿ.ಪಿ. ಬಿಟ್ಟು ಬಂದ ವಿದ್ಯಾರ್ಥಿಗಳು ಹಾಗೂ ಅವರ ಪಾಲಕರ ಮನೆ ನುಗ್ಗಿ ಹಲ್ಲೆ ನಡೆಸಿದರು. ಮಾರ್ಕೆಟನಲ್ಲಿ ಸಿಕ್ಕಾಪಟ್ಟೆ ಲೂಟಿ ನಡೆಸಿದರು. ಪೋಲೀಸಿನವರು ಈ ಲೂಟಿಕೋರರನ್ನು ಬಂಧಿಸುವ ಬದಲು ಅಂಗಡಿಕಾರರ ಸಹಾಯಕ್ಕೆ ಧಾವಿಸಿದ ಎಸ್.ಎಫ್.ಐ. ಕಾರ್ಯಕರ್ತರನ್ನೇ ಬಂಧಿಸಿದರು. ಈ ಬಗ್ಗೆ ಎಸ್.ಎಫ್.ಐ ನ ರಾಜ್ಯ ಸಮಿತಿ ಮೇಲಿನ ಅಧಿಕಾರಿಗಳನ್ನು ಕಂಡು ಮಾತನಾಡಿದೆ ಹಾಗೂ ಎ.ಬಿ.ವಿ.ಪಿ.— ಆರ್.ಎಸ್.ಎಸ್.ನ ಸಮಾಜಘಾತಕ ಕೃತ್ಯ ಮುಂದುವರಿಸಿದರೆ ತಕ್ಕ ಫಲ ಉಣ್ಣಬೇಕಾದೀತೆಂದು ಅವರಿಗೆ ಎಚ್ಚರಿಕೆ ನೀಡಿದೆ.

○

ಪಶ್ಚಿಮ ಬಂಗಾಳ

ಸಣಬು ಕಾರ್ಮಿಕರ ಯಶಸ್ವೀ ಮುಷ್ಕರ

ಸಣಬು ಉದ್ದಿಮೆಯಲ್ಲಿ ಹಿಂಜರಿತ ಉಂಟಾಗಿದೆಯೆಂಬ ಸುಳ್ಳು ನೆವವೊಡ್ಡಿ ಅಪಾರ ಲಾಭವನ್ನು ಬೇರೆಡೆ ವರ್ಗಾಯಿಸಿ ಹದಿನೇಳು ಮಿಲ್ಲುಗಳನ್ನು ಮುಚ್ಚಿರುವುದರ ವಿರುದ್ಧ ತಿಂಗಳುಗಳಿಂದ ತಮ್ಮ ಪ್ರತಿಭಟನೆ ಸೂಚಿಸುತ್ತಿದ್ದ ಸಣಬು ಕಾರ್ಮಿಕರು ಆಗಸ್ಟ 10 ರಂದು ಒಂದು ದಿನದ ಮುಷ್ಕರ ನಡೆಸಿದರು. ರಾಜ್ಯದ 64 ಮಿಲ್ಲುಗಳ ಮೂರೂವರೆ ಲಕ್ಷಕ್ಕೂ ಮೀರಿದ ಕಾರ್ಮಿಕರು ಸಂಪೂರ್ಣವಾಗಿ ಭಾಗವಹಿಸಿದ ಈ ಮುಷ್ಕರಕ್ಕೆ ಬಂಗಾಲ ಚಟ್ಕಲ್ ಮಜದೂರ ಯೂನಿಯನ್ ಹಾಗೂ ಇತರ ಆರು ಸಂಘಗಳು ಕರೆ ಕೊಟ್ಟಿದ್ದವು. ಗಂಗಾನದಿಯ ಎರಡೂ ದಡಗಳಲ್ಲಿ ಹಂಚಿಕೊಂಡ ಈ ಗಿರಣಿಗಳಲ್ಲಿ ದುಡಿಯುತ್ತಿರುವ ಕಾರ್ಮಿಕರು ಸಹಸ್ರ–ಸಹಸ್ರ ಸಂಖ್ಯೆಯಲ್ಲಿ ಮೆರವಣಿಗೆಯಲ್ಲಿ ಕಲಕತ್ತೆಗೆ ಬಂದು ಬೃಹತ್ ಪ್ರದರ್ಶನ ನಡೆಸಿದರು.

(1) ಈಗ ಮುಚ್ಚಿರುವ ಬೀಗ ಮುದ್ರೆ ಹಾಕಿರುವ ಎಲ್ಲಾ ಗಿರಣಿಗಳನ್ನು ತೆರೆಯಬೇಕು. (2) ಉತ್ಪಾದನಾ ಕಡಿತ ರದ್ದುಗೊಳಿಸಿ ಕಾರ್ಮಿಕರಿಗೆ ಪೂರ್ಣ ಕೆಲಸ ಹಾಗೂ ವೇತನ ನೀಡಬೇಕು. (3) ಕಚ್ಚಾ ಸಣಬಿಗೆ ಕ್ವಿಂಟಾಲ್‌ಗೆ 300 ರೂ. ಬೆಳೆಗಾರರು ಪಡೆಯುವಂತೆ ಕೇಂದ್ರ ಸರಕಾರ ಕ್ರಮ ಕೈಗೊಳ್ಳಬೇಕು ಹಾಗೂ (4) 1979 ರಲ್ಲಿ 50 ದಿನದ ಮುಷ್ಕರದ ನಂತರ ಮಾಡಿಕೊಂಡ ಒಪ್ಪಂದವನ್ನು ಗಿರಣಿ ಮಾಲೀಕರು ಪರಿಪಾಲಿಸಬೇಕು. ಈ ನಾಲ್ಕು ಬೇಡಿಕೆಗಳನ್ನು ಈಡೇರಿಸಬೇಕೆಂದು ಸಣಬು ಕಾರ್ಮಿಕರು ಕಲಕತ್ತೆಯ ಬೃಹತ್ ರ್‍ಯಾಲಿಯಲ್ಲಿ ಒತ್ತಾಯಿಸಿದರು.

○

ಎ.ಐ.ಕೆ.ಎಸ್.

ಸಮ್ಮೇಳನ-ಸ್ವಾಗತ ಸಮಿತಿ

ನವೆಂಬರ್ 8 ರಿಂದ 11ರ ವರೆಗೆ ಪ. ಬಂಗಾಲದ ಮಿದ್ನಾಪುರದಲ್ಲಿ ನಡೆಯಲಿರುವ ಅಖಿಲ ಭಾರತ ಕಿಸಾನ್ ಸಭಾದ 24ನೇ ಸಮ್ಮೇಳನಕ್ಕೆ ಭರದಿಂದ ಸಿದ್ಧತೆಗಳು ನಡೆದಿವೆ.

ಜುಲೈ 10 ರಂದು ಮಿದ್ನಾಪುರದಲ್ಲಿ ನಡೆದ ಸಭೆಯಲ್ಲಿ ಕಾಂ! ಜ್ಯೋತಿಬಸು ಅಧ್ಯಕ್ಷರಾಗಿರುವ ಮತ್ತು ಕಾಂ। ಶಾಂತಿಮೊಯ್ ಘೋಷ್ ಕಾರ್ಯದರ್ಶಿಯಾಗಿರುವ ಸ್ವಾಗತ ಸಮಿತಿಯನ್ನು ರಚಿಸಲಾಗಿದೆ.

ಇತ್ತೀಚೆಗೆ ದೆಹಲಿಯಲ್ಲಿ ಸಭೆ ಸೇರಿದ್ದ ಎ.ಐ.ಕೆ.ಎಸ್. ಕಾರ್ಯಕಾರೀ ಸಮಿತಿಯು ಸಮ್ಮೇಳನವನ್ನು ಮಿದ್ನಾಪುರದಲ್ಲಿ ನಡೆಸಲು ತೀರ್ಮಾನಿಸಿದೆ. ಇತ್ತೀಚೆಗೆ ನಿಧನರಾದ ಕಾಂ! ಸೋಹನ್‌ಸಿಂಗ್ ಜೋಶ್‌ರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿದೆ.

ಅಣ್ವಸ್ತ್ರಗಳಿಗೆ ಧಿಕ್ಕಾರ !

ಕಳೆದ ಡಿಸೆಂಬರ್‌ನಲ್ಲಿ ಕ್ಯೂಬಾದ ಹವಾನಾದಲ್ಲಿ ಸಮಾವೇಶಗೊಂಡಿದ್ದ ಡಬ್ಲ್ಯೂ. ಎಫ್.ಟಿ.ಯು. ಸಮ್ಮೇಳನವು ಸೆಪ್ಟಂಬರ್ 1, 1982ನ್ನು 'ಶಾಂತಿ ಮತ್ತು ಸೌಹಾರ್ದತಾ ದಿನವನ್ನಾಗಿ ಆಚರಿಸಲು ಕರೆ ಕೊಟ್ಟಿದೆ.

ಕಳೆದೆರಡು ಜಾಗತಿಕ ಯುದ್ಧದಲ್ಲಿ ಮೃತರಾದವರು ಕೋಟ್ಯಾಂತರ ಜನ. ಫ್ಯಾಸಿಸ್ಟರು ನಗರಗಳನ್ನು, ಹಳ್ಳಿಗಳನ್ನು ಮಸಣ ಮಾಡಿದ್ದರು. ಈ ಘೋರ ಯುದ್ಧದ ಕರಾಳ ನೆನಪು ಇನ್ನೂ ಮಾಸಿಲ್ಲ. ಬದುಕುಳಿದ ಜನ ಚೇತರಿಸಿಕೊಂಡಿಲ್ಲ.

ಇದೀಗ ಮತ್ತೊಂದು ಅಪಾಯವನ್ನು ಮಾನವ ಜನಾಂಗ ಎದುರಿಸುತ್ತಿದೆ. ಯುದ್ಧ ಪಿಪಾಸು ಸಾಮ್ರಾಜ್ಯಶಾಹಿಗಳು ಮತ್ತೆ ವಿಶ್ವವನ್ನು ಗಂಡಾಂತರಕ್ಕೆ ನೂಕುತ್ತಿದ್ದಾರೆ. ಹೊಸದಾಗಿ ಕಂಡು ಹಿಡಿದ ನ್ಯೂಟ್ರಾನ್ ಬಾಂಬ್ ಯಾವುದೇ ಸದ್ದು ಗದ್ದಲವಿಲ್ಲದೇ ಮಾನವಕೋಟಿಯನ್ನೇ ಮುಗಿಸಿಬಿಡಬಲ್ಲದು

ಈ ಯುದ್ಧ ಪ್ರಯತ್ನಗಳ ವಿರುದ್ಧ ವಿಶ್ವದ ನಾನಾಕಡೆ ಬೃಹತ್ ಚಳುವಳಿ ನಡೆದಿವೆ. ನಡೆಯುತ್ತಿವೆ.

ಸೆಪ್ಟೆಂಬರ್ 1ರ 'ಶಾಂತಿ ಮತ್ತು ಸೌಹಾರ್ದತಾ' ದಿನಾಚರಣೆಯ ಅಂಗವಾಗಿ ನಡೆಯಲಿರುವ ಕಾರ್ಯಕ್ರಮಕ್ಕೆ ಪೂರಕವಾಗಿ ಈ ಲೇಖನವನ್ನು ಪ್ರಕಟಿಸುತ್ತಿದ್ದೇವೆ.

ಜಗತ್ತಿನಾದ್ಯಂತ ಬೆಳೆಯುತ್ತಿರುವ ಶಾಂತಿ ಚಳುವಳಿ

ಯುದ್ಧಾಸ್ತ್ರಗಳ ಪೈಪೋಟಿಯ ತಡೆಗೆ ಒತ್ತಾಯ ಅದರಲ್ಲೂ ಅಣ್ವಸ್ತ್ರಗಳ ತಯಾರಿಯ ವಿರುದ್ಧದ ಕೂಗು 1980ರ ವಿಶೇಷವಾಗಿದೆ. ಇಂದಿನ ಈ ಯುದ್ಧ ವಿರೋಧಿ ಚಳುವಳಿಯು ವಿಭಿನ್ನ ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ನಂಬಿಕೆಗಳ ಜನರನ್ನು ಒಗ್ಗೂಡಿಸಿ ಒಕ್ಕೊರಳಿನಿಂದ ಪ್ರತಿಭಟಿಸುವಂತೆ ಮಾಡಿದೆ.

1981ರಲ್ಲಿ ಸ್ಕಾಂಡಿನೇವಿಯಾದ "ಶಾಂತಿಗಾಗಿ ಮಹಿಳೆ" ಸಂಘಟನೆಯು ಆಕರ್ಷಕವಾದ "ಶಾಂತಿ ಮೆರವಣಿಗೆ' 81"ನ್ನು ಕೋಪೆನ್ ಹೆಗನ್‌ನಿಂದ ಪ್ಯಾರಿಸ್‌ವರೆಗೆ ನಡೆಸಿತು. ಈ ವರ್ಷ ಸೋವಿಯತ್ ದೇಶದ ಜನರೊಂದಿಗೆ ಸೇರಿ ಜಂಟಿ ಶಾಂತಿ ಮೆರವಣಿಗೆ ನಡೆಸುವ ಬಗ್ಗೆ ಅವರು ಸೂಚಿಸಿದ್ದಾರೆ. ಸೋವಿಯತ್ ದೇಶದ ಶಾಂತಿ ಮತ್ತು ಮಹಿಳಾ ಸಮಿತಿಗಳು ಸಂತೋಷದಿಂದ ಇದನ್ನು ಅಂಗೀಕರಿಸಿವೆ.

ಸೋವಿಯತ್ ದೇಶದ ಶಾಂತಿ ಚಳುವಳಿಯು ಈಗಾಗಲೇ ವಿಶಾಲ ತಳಹದಿಯ ಜನ ವಿಭಾಗವನ್ನು ಒಳಗೊಂಡಿದ್ದು ಸೋವಿಯತ್ ಶಾಂತಿ ಕಾರ್ಯಕ್ರಮವು 130 ಮಿಲಿಯ ಜನರ ಬೆಂಬಲ ಪಡೆದಿದೆ. ವಿಶ್ವಸಂಸ್ಥೆಯ ಮಹಾಸಭೆಯ 2ನೇ ವಿಶೇಷ ಅಧಿವೇಶನದ ಸಂದರ್ಭದಲ್ಲಿ ಸೋವಿಯತ್ ಒಕ್ಕೂಟದಲ್ಲಿ 20,000ಕ್ಕೂ ಹೆಚ್ಚು ಸಭೆಗಳು ನಡೆದು ಇದರಲ್ಲಿ 60 ಮಿಲಿಯದಷ್ಟು ಜನತೆ ಭಾಗವಹಿಸಿದ್ದರು.

ಸ್ಟಾಕ್‌ಹೊಂನಿಂದ ಜುಲೈ 13ರಂದು "ಶಾಂತಿ ಮೆರವಣಿಗೆ 82" ಮೊದಲಿಗೆ ಆರಂಭವಾಯಿತು. ಇದು ಡೆನ್ಮಾರ್ಕ್, ನಾರ್ವೆ, ಸ್ವೀಡನ್ ಮತ್ತು ಫಿನ್‌ಲೆಂಡ್‌ನ ಯುದ್ಧ ವಿರೋಧಿ ಚಳುವಳಿಯ ಕಾರ್ಯಕರ್ತರನ್ನೂ ಒಳಗೊಂಡಿತ್ತು. ಜುಲೈ 17 ರಂದು ಫಿನ್‌ಲೆಂಡಿನ ಹೆಲ್‌ಸಿಂಕಿ ಮೂಲಕ ಹೊರಟು ಇವರು ರೈಲಿನಲ್ಲಿ ಲೆನಿನ್ ಗ್ರಾಡ್ ಮತ್ತು ಕಲಿನಿನ್‌ಗೆ ತಲುಪಿದರು. ಮಾಸ್ಕೋ ನಗರಕ್ಕೆ ಜುಲೈ 21ಕ್ಕೆ, ಮಿನ್ಸ್ಕ್‌ಗೆ ಜುಲೈ 27ಕ್ಕೆ ನಂತರ ಖದ್ಯಾನ್ ತಲುಪಿದರು. ಪ್ರತಿಯೊಂದು ನಗರಗಳಲ್ಲೂ ಬೀದಿ ಮೆರವಣಿಗೆ, ಸಭೆಗಳು ನಡೆದವು.

ಬೈಲೊರಶಿಯಾದಲ್ಲಿರುವ ಖಥಿನ್ ನಗರವು ಝುಕೊಸ್ಲೋವಾಕಿಯಾದ ಲಿಡಿಸ್ಕಿಯನ್ನು ಅಥವಾ ಫ್ರಾನ್ಸ್‌ನ ಬರಾಡೋರ್ ನಗರವನ್ನು ಹೋಲುತ್ತದೆ. ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ನಾಝಿ ಫ್ಯಾಸಿಸ್ಟರಿಂದ ಸರ್ವನಾಶ ಮಾಡಲ್ಪಟ್ಟಿತ್ತು. ಲೆನಿನ್ ಗ್ರಾಡ್ ಎಲ್ಲರಿಗೂ ತಿಳಿದಿರುವಂತೆ 900 ದಿನಗಳ ಮುತ್ತಿಗೆಗೆ ಒಳಪಟ್ಟು ನೂರಾರು, ಸಾವಿರಾರು ಜನರ ಸಾವಿನ ನಂತರ ಅಂತಿಮ ವಿಜಯ ಸಾಧಿಸಿತು. ಶಾಂತಿ ಚಳುವಳಿಯು ಪೇಸ್ಕರ್ ಎವಸ್ಕೋಯ ಸಮಾಧಿ ಬಳಿ ಮೆರವಣಿಗೆ ಮತ್ತು ಪ್ರದರ್ಶನಗಳನ್ನು ನಡೆಸುವ ಮೂಲಕ ಹುತಾತ್ಮ ಜೀವಗಳಿಗೆ ಶ್ರದ್ಧಾಂಜಲಿ ಸಲ್ಲಿಸಿತು.

ಶಾಂತಿ ಮೆರವಣಿಗೆಯ ಎರಡನೆಯ ಘಟ್ಟವು ಮಾಸ್ಕೊ ನಗರದಿಂದ ಜುಲೈ 30ಕ್ಕೆ ಆರಂಭವಾಗಿ ಕಿವ್ ಮೂಲಕ ಹಾದು ಸೋವಿಯತ್ ಒಕ್ಕೂಟದ ಪಶ್ಚಿಮ ಭಾಗಕ್ಕೆ ಸಾಗಿತು. ಇದರಲ್ಲಿ ಭಾಗಿಗಳಾದವರು ವಿಶೇಷ ರೈಲು ಗಾಡಿಯಲ್ಲಿ ಹೊರಟು ಎಲ್ಲಾ ನಿಲ್ದಾಣಗಳಲ್ಲಿ ಮೆರವಣಿಗೆ ನಡೆಸಿದರು. ಆಗಸ್ಟ್ 5 ರಂದು ಶಾಂತಿ ಮೆರವಣಿಗೆಯು ವಿಯೆನ್ನಾದ ಮಾರ್ಗವಾಗಿ ಬುಡಾಪೆಸ್ಟ್‌ಗೆ ಆಗಮಿಸಿದಾಗ ಸ್ಫೂರ್ತಿದಾಯಕ ಸ್ವಾಗತ ನೀಡಲಾಯಿತು.

ವಿಸ್ತರಿಸುತ್ತಿರುವ ಚಳುವಳಿ:

ಯುರೋಪಿನಲ್ಲಿ ಯುದ್ಧ ವಿರೋಧಿ ಚಳುವಳಿಯು ವಿಶಾಲ ತಳಹದಿಯನ್ನು ಪಡೆಯುತ್ತಿದ್ದು ಉತ್ತಮವಾದ ನಿರ್ದಿಷ್ಟ ಫಲಿತಾಂಶಗಳನ್ನು ಪಡೆಯುತ್ತಿದೆ. ಇದರ ಒತ್ತಾಯಕ್ಕೆ ಮಣಿದು ಅಣುಕ್ಷಿಪಣಿಗಳನ್ನು ಇರಿಸಲು ಆಯ್ಕೆಯಾಗಿದ್ದ 5 ರಾಷ್ಟ್ರಗಳಲ್ಲಿ ಎರಡಾದ ಬೆಲ್ಜಿಯಂ ಮತ್ತು ನೆದರ್‌ಲೆಂಡ್ ರಾಷ್ಟ್ರಗಳು ತಮ್ಮ ನಿರ್ಧಾರಗಳನ್ನು ಬದಲಿಸುತ್ತಿವೆ. "ನ್ಯಾಟೋ ಮುಖಂಡರುಗಳು ಈ ಬಗ್ಗೆ ದೂರಿದ್ದಾರೆ.

ಪಶ್ಚಿಮ ಜರ್ಮನಿಯ ಚಾನ್ಸಲರ್ ಸ್ಮಿತ್ ತನ್ನ ಪ್ರದೇಶದಲ್ಲಿ ಪರ್‌ಶಿಂಗ್–2 ಮತ್ತು ಭೂ ಆಧಾರಿತ ಕ್ಷಿಪಣಿಗಳನ್ನು ಇರಿಸಲು ಅವಕಾಶ ನೀಡಲಾಗುವುದಿಲ್ಲವೆಂದು ಹೇಳುವ ಮೂಲಕ ವಿಷಯಕ್ಕೆ ಹೊಸ ತಿರುವು ನೀಡಿದ್ದಾರೆ. ಬ್ರಿಟನ್ ಮತ್ತು ಪ. ಜರ್ಮನಿ ಹೊರತಾಗಿ ಇತರ ಯುರೋಪಿಯನ್ ರಾಷ್ಟ್ರಗಳು ಕ್ಷಿಪಣಿ ಹೊಂದಲು ನಿರಾಕರಿಸಿದಲ್ಲಿ ಕ್ರಮ ತೆಗೆದುಕೊಳ್ಳುವ ಸೂಚನೆ ನೀಡುವಂತೆ ಮಾಡಿದೆ. ಆದರೆ ಯುದ್ಧ ವಿರೋಧಿ ಚಳುವಳಿಯು ಪಶ್ಚಿಮ ಜರ್ಮನಿ, ಬ್ರಿಟನ್, ನೆದರ್‌ಲ್ಯಾಂಡ್, ಬೆಲ್ಜಿಯಂ, ನಾರ್ವೆ, ಡೆನ್ಮಾರ್ಕ್, ಇಟಲಿ ಮತ್ತಿತರ ರಾಷ್ಟ್ರಗಳೂ ಸೇರಿದಂತೆ ಯುರೋಪಿನಾದ್ಯಂತ ಪಸರಿಸಲ್ಪಡುತ್ತಿದೆ.

ಯುದ್ಧ ವಿರೋಧಿ ಪ್ರಚಾರವು ಪ. ಜರ್ಮನಿಯಲ್ಲಿ ದೊಡ್ಡ ರೀತಿಯಲ್ಲಿ ಬೆಳೆಯುತ್ತಿದೆ. ಕಳೆದ ಅಕ್ಟೋಬರ್‌ನಲ್ಲಿ ಪ. ಜರ್ಮನಿಯ ಬಾನ್‌ನಲ್ಲಿ ನಡೆದ ಯುದ್ಧ ವಿರೋಧಿ ಪ್ರದರ್ಶನವು ಸಾರ್ವಕಾಲಿಕ ದಾಖಲೆಯನ್ನು ಸ್ಥಾಪಿಸಿದೆ. ವಿಭಿನ್ನ ರಾಜಕೀಯ ನಿಲುವಿನ, ವಿವಿಧ ಸಾಮಾಜಿಕ ಸ್ತರದ 300,000ದಷ್ಟು ಜನಸಾಗರವು ರಾಷ್ಟ್ರದ ಎಲ್ಲಾ ಭಾಗಗಳಿಂದ ಬಂದು ಇದರಲ್ಲಿ ಭಾಗವಹಿಸಿತ್ತು. ಸೋಶಿಯಲ್ ಡೆಮೋಕ್ರಟರು, ಕಮ್ಯೂನಿಸ್ಟರು, ಕಾರ್ಮಿಕರು, ವಿದ್ಯಾರ್ಥಿಗಳು ಧಾರ್ಮಿಕ ಮುಖಂಡರು, ವಿಜ್ಞಾನಿಗಳು, ಬರಹಗಾರರು, ಕಾರ್ಮಿಕ ಸಂಘಟಕರು ಮೊದಲಾದವರು ಇದರಲ್ಲಿ ಭಾಗಿಗಳಾಗಿದ್ದರು. ಕಳೆದ ಅಕ್ಟೋಬರ್‌ನಲ್ಲಿ ಸಮಾಜದ ಹೆಚ್ಚೆಚ್ಚು ಜನವಿಭಾಗವನ್ನು ತಲುಪುತ್ತಿರುವಂತೆ ಶಾಂತಿ ಚಳುವಳಿಯು ಸಾಮಾಜಿಕ ಮತ್ತು ರಾಜಕೀಯ ತಳಹದಿಯು ಅದಕ್ಕನುಸಾರವಾಗಿ ವಿಸ್ತರಿಸಲ್ಪಡುತ್ತಿದೆ. ಸಾಂಸ್ಕೃತಿಕ, ವೈಜ್ಞಾನಿಕ, ವೈದ್ಯಕೀಯ ಮತ್ತು ಇತರ ವೃತ್ತಿನಿರತ ಸಂಘ ಸಂಸ್ಥೆಗಳು ಶಾಂತಿ ಅಧ್ಯಯನ ಸಂಘಟನೆಗಳಾದ "ಅಣ್ವಸ್ತ್ರಗಳ ವಿರುದ್ಧದ ವಿಜ್ಞಾನಿಗಳು" ಮತ್ತು "ಅಣು ಯುದ್ಧ ತಡೆಯಲು ಪರವಾದ ವೈದ್ಯರು" ಇವರುಗಳೊಂದಿಗೆ ಚಳುವಳಿಯಲ್ಲಿ ಸೇರಿವೆ. ಗಣನೀಯ ಸಂಖ್ಯೆಯಲ್ಲಿ ದೊಡ್ಡ ಧಾರ್ಮಿಕ ಸಂಘಟನೆಗಳು ಈ ಹೋರಾಟಗಳಲ್ಲಿ ಭಾಗವಹಿಸುತ್ತಿವೆ. ಇವುಗಳಲ್ಲಿ ಬೆಲ್ಜಿಯಂ, ನೆದರ್‌ಲ್ಯಾಂಡ್, ಆಸ್ಟ್ರೀಯದ ಕೆಥೋಲಿಕ್ ಧಾರ್ಮಿಕ ಸಂಸ್ಥೆಗಳು ಮತ್ತು ಈ ಬಗ್ಗೆ ಇನ್ನೂ ಗಂಭೀರವಾಗಿ ಚಿಂತಿಸುತ್ತಿರುವ ನೂರು ರಾಷ್ಟ್ರಗಳಲ್ಲಿ 300 ಚರ್ಚ್‌ಗಳ ಸದಸ್ಯತ್ವ ಹೊಂದಿರುವ ಪ್ರೊಟೆಸ್ಟಂಟ್ ಸಂಘಟನೆಯಾದ "ಜಾಗತಿಕ ಚರ್ಚ್‌ಗಳ ಕೌನ್ಸಿಲ್" ಮುಖ್ಯವಾದವುಗಳು.

"ನ್ಯಾಟೋ"ವಿನ ಹಿಂದಿನ ದೊಡ್ಡ ಸೈನಿಕ ಅಧಿಕಾರಿಗಳೂ ಶಾಂತಿ ಚಳುವಳಿಗಳಲ್ಲಿ ಭಾಗವಹಿಸುತ್ತಿರುವುದು ಒಂದು ಗಣನೀಯ ಬೆಳವಣಿಗೆಯಾಗಿದೆ. ಇಟಲಿಯ ಜನರಲ್ ನಿನೋಪಸ್ಟಿ, ಪೋರ್ಚುಗೀಸ್ ಜನರಲ್ ಪ್ರಾನ್ಸಿಸ್ಕೊಡಾ ಕೋಸ್ಟಾ ಗೋಮ್ಸ್, ಪಶ್ಚಿಮ ಜರ್ಮನಿಯ ಜನರಲ್ ಗೆರ್ಟ್ ಬಸ್ಟಿಯಾನ್, ಗ್ರೀಕ್‌ನ ಜನರಲ್ ಗಿಯೋರ್ಗಿಯಸ್ ಕುಮಂಕೋಸ್, ಅಮೇರಿಕಾದ ಎಡ್ಮಿರಲ್ ಜನರಲ್ ಗಿನಿ ಲಾರೋಕ್, ಫ್ರಾನ್ಸಿನ ಎಡ್ಮಿರಲ್ ಅಂಟೋನಿ ಸಾಂಗ್ವೆ ನಿಟ್ಟಿ ಮೊದಲಾದ ಸೈನಿಕ ಪ್ರಮುಖರು ಬಹಿರಂಗವಾಗಿಯೇ ಸೈನ್ಯ ಜಮಾವಣೆಯ ವಿರುದ್ಧ ಹೇಳಿಕೆಗಳನಿತ್ತಿದ್ದಾರೆ.

"ನ್ಯಾಟೋ"ದ ಎಲ್ಲಾ ಯೋಜನೆಗಳು ವಿಫಲವಾಗುತ್ತವೆ.

ಈ ಬೆಳವಣಿಗೆಯು ಜನರ ನಡುವೆ ಸೈನಿಕ ಪ್ರಚಾರ ನಡೆಸುವ "ನ್ಯಾಟೋ"ದ ವಿಶೇಷ ವಿಭಾಗವು ತನ್ನ ಸದಸ್ಯತ್ವ ಹೊಂದಿರುವ 15 ರಾಷ್ಟ್ರಗಳಿಗೆ ಯುದ್ಧ ವಿರೋಧಿ ಚಳುವಳಿಯ ಬಗ್ಗೆ ಸೂಕ್ತ

ಈ ಹಿಂದೆಂದೂ ನಡೆದಿರದಂತಹ ದೊಡ್ಡ ರೀತಿಯ ಯುದ್ಧ ವಿರೋಧಿ ಪ್ರದರ್ಶನಗಳು ಪ್ಯಾರಿಸ್, ಲಂಡನ್, ರೋಮ್, ಬ್ರುಸೇಲ್ಸ್, ಹೆಲ್‌ಸಿಂಕಿ ಮೊದಲಾದ ಯುರೋಪಿನ ನಗರಗಳಲ್ಲಿ ನಡೆದವು.

ವಿಸ್ತರಿಸುವ ತಳಪಾಯ :

ಯುದ್ಧ ವಿರೋಧಿ ಮನವಿಗಳು

ಈಗ ಯುದ್ಧ ವಿರೋಧಿ ಚಳುವಳಿಯ ಗಮನವು ಅಣ್ವಸ್ತ್ರ ಮುಕ್ತ ವಲಯಗಳ ಬೇಡಿಕೆಯತ್ತ ಮತ್ತು ಪೂರ್ಣ ಪ್ರಮಾಣದಲ್ಲಿ ಅಣ್ವಸ್ತ್ರಗಳನ್ನು ತಯಾರಿಸುವ ಅಮೇರಿಕಾದ ನಿರ್ಧಾರದತ್ತ ಹರಿಯಲ್ಪಟ್ಟಿದೆ. ಅಮೇರಿಕಾದ ಆಡಳಿತಗಾರರ ಉದ್ಧಟತನವು ಇಂತಹ ನಿರ್ಧಾರವನ್ನು ಇಡೀ ಜಗತ್ತಿನ ಜನಾಭಿಪ್ರಾಯಕ್ಕೆ ವಿರುದ್ಧವಾಗಿ ಮತ್ತು ಇದರ 'ನ್ಯಾಟೊ' ಮಿತ್ರರೊಂದಿಗೂ ಕೂಡ ಇಂತಹ ಗಂಭೀರ ತೀರ್ಮಾನಗಳನ್ನು ತೆಗೆದುಕೊಳ್ಳುವ ಮೊದಲು ಚರ್ಚಿಸದಿರುವುದರಿಂದ ಸ್ಪಷ್ಟವಾಗಿದೆ.

ಅಮೇರಿಕಾದ ಚಳುವಳಿ:

ಯುರೋಪಿನ ಗಡಿದಾಟಿ ಶಾಂತಿ ಚಳುವಳಿಯು ಸಾಗುತ್ತಿರುವುದು ಇಂದಿನ ವಾಸ್ತವ. ಅಮೇರಿಕಾದಲ್ಲಿ

(8ನೇ ಪುಟ ನೋಡಿ)



ನ್ಯೂಟ್ರಾನ್,

ನುಚ್ಚು ನೂರಾಗಿಸುವಾ
ಭೂಮಿಗೆ ಬೀಳುವ ಮುನ್ನ,
ಬದುಕಲೆಂದು ಜೀವಿ
ನೂರು — ನೂರಾರು ವರುಷ.

(ಮೇಲ್ಕಂಡ ಚಿತ್ರವನ್ನು ಮತ್ತು ಈ ಹನಿಗವನವನ್ನು ರಚಿಸಿದವರು 'ಚಿತೆ' ಅವರು.)

ಮೈಸೂರು :

ಸಾಮ್ರಾಜ್ಯಶಾಹಿ ವಿರೋಧಿ ದಿನಾಚರಣೆ ಯುವಜನರ ರ್‍ಯಾಲಿ, ಸಭೆ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ.) ಮೈಸೂರು ಜಿಲ್ಲಾ ಸಮಿತಿಯು 15-8-82 ರಂದು 'ಸಾಮ್ರಾಜ್ಯಶಾಹಿ ವಿರೋಧಿ ದಿನಾಚರಣೆಯನ್ನು ಯಶಸ್ವಿಯಾಗಿ ಆಚರಿಸಿತು. ನೂರಕ್ಕೂ ಮಿಕ್ಕಿ ಯುವಜನರು ಮೈಸೂರು ನಗರದ ಮುಖ್ಯ ಬೀದಿಗಳಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಘೋಷಣೆ ಕೂಗುತ್ತಾ ಮೆರವಣಿಗೆ ನಡೆಸಿದರು. ನಂತರ ಸ್ಥಳೀಯ ಮಂಡಯಂ ವಿದ್ಯಾರ್ಥಿ ನಿಲಯದಲ್ಲಿ ಸಭೆ ನಡೆಸಲಾಯಿತು.

ಡಿ ವೈ ಎಫ್.ಐ. ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಂ| ಜಿ. ವಿ. ಶ್ರೀರಾಮರೆಡ್ಡಿಯವರು ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದರು.

ಕಾಂ| ರೆಡ್ಡಿಯವರು ಮಾತನಾಡುತ್ತಾ, ಹೊಸ ಮುಖವಾಡ ಧರಿಸಿಕೊಂಡು ಸಾಮ್ರಾಜ್ಯಶಾಹಿಗಳು ನ್ಯೂಕ್ಲಿಯರ್ ಯುದ್ಧದ ಅಪಾಯವನ್ನು ಜಗತ್ತಿನಾದ್ಯಂತ ವಿಸ್ತರಿಸಿದ್ದರಿಂದ ಜಗತ್ತಿನ ಶಾಂತಿಗೆ ಗಂಡಾಂತರ ಬಂದಿದೆ ಎಂದರು. "ಆಸ್ತಿಯನ್ನು ಉಳಿಸಿ ಜನರನ್ನು ನಾಶಮಾಡುವ ನೀತಿಗೆ ಬದ್ಧವಾಗಿರುವ ಸಾಮ್ರಾಜ್ಯಶಾಹಿ ಅಮೇರಿಕವು ಎಫ್—16 ವಿಮಾನಗಳೂ ಸೇರಿದಂತೆ ಇತರ ಮಾರಕಾಸ್ತ್ರಗಳನ್ನು ಪಾಕೀಸ್ತಾನಕ್ಕೆ ನೀಡುವ ಮೂಲಕ ಭಾರತದ ಭದ್ರತೆಗೆ ಅಪಾಯವನ್ನೊಡ್ಡುತ್ತಿದೆ. ಇನ್ನೊಂದು ಜಾಗತಿಕ ಯುದ್ಧವಾದರೆ ಸರ್ವನಾಶ ಖಂಡಿತ. ಆದ್ದರಿಂದ ಜಗತ್ತಿನಾದ್ಯಂತ ಬೆಳೆಯುತ್ತಿರುವ ಯುದ್ಧ ವಿರೋಧಿ ಚಳುವಳಿಗಳಿಗೆ ಬೆಂಬಲ ನೀಡುವುದು ನಮ್ಮ ಆದ್ಯ ಕರ್ತವ್ಯವಾಗಿದೆ" ಎಂದು ಕಾಂ| ರೆಡ್ಡಿ ತಿಳಿಸಿದರು.

ಸಭೆಯನ್ನುದ್ದೇಶಿಸಿ ಕಾಂ| ಆರ್. ಜಯಕುಮಾರ್ (ಎಸ್. ಎಫ್. ಐ. ರಾಜ್ಯ ಸಮಿತಿ ಅಧ್ಯಕ್ಷ) ಅವರು ಮಾತನಾಡುತ್ತಾ, ಜಗತ್ತಿನಾದ್ಯಂತ ಬೆಳೆದು ಬರುತ್ತಿರುವ ವಿಮೋಚನಾ ಹೋರಾಟಗಳನ್ನು ಬಗ್ಗು ಬಡೆಯಲು ಅಮೇರಿಕ ನಡೆಸುತ್ತಿರುವ ಪಿತೂರಿಗಳನ್ನು ವಿವರಿಸಿ, ಸಮಾಜವಾದಿ ವ್ಯವಸ್ಥೆಯನ್ನು ಉಳಿಸುವುದು ನಮ್ಮೆಲ್ಲರ ಮುಂದಿರುವ ದೊಡ್ಡ ಕರ್ತವ್ಯ ಎಂದರು. ಅಕ್ಟೋಬರ್ 4 ರಂದು ಆರು ಪಕ್ಷಗಳ ನೇತೃತ್ವದಲ್ಲಿ ದೆಹಲಿಯಲ್ಲಿ ನಡೆಯುವ ಬೃಹತ್ ರ್‍ಯಾಲಿಯಲ್ಲಿ ವಿದ್ಯಾರ್ಥಿ-ಯುವಜನರು ಭಾಗವಹಿಸಿ, ಯಶಸ್ವಿ ಮಾಡಬೇಕಾಗಿ ಕಾಂ| ಜಯಕುಮಾರ್ ಕೋರಿದರು.

ಡಿ. ವೈ. ಎಫ್. ಐ. ರಾಜ್ಯ ಸಮಿತಿ ಸದಸ್ಯ ಕಾಂ| ಮೋಹನ್‌ಕುಮಾರ್ ಅವರು ಮಾತನಾಡುತ್ತಾ, ಸಾಮ್ರಾಜ್ಯಶಾಹಿಗಳ ಹಸ್ತಕ್ಷೇಪದಿಂದಾಗಿ ಭಾರತದ ಏಕತೆ ಮತ್ತು ಸ್ವಾತಂತ್ರ್ಯಕ್ಕೆ ಬಂದಿರುವ ಅಪಾಯವನ್ನು ವಿವರಿಸಿದರು. ಹಿಂದೂ ಮಹಾಸಾಗರ ಸೇರಿದಂತೆ ಎಲ್ಲೆಡೆ ಯುದ್ಧ ನೆಲೆಗಳನ್ನು ಅಮೇರಿಕವು ವ್ಯಾಪಿಸಿಕೊಳ್ಳುತ್ತಿದ್ದು, ಇದರಿಂದ ಸುತ್ತಮುತ್ತಲ ರಾಷ್ಟ್ರಗಳ ಸ್ವಾತಂತ್ರ್ಯಕ್ಕೆ ಅಪಾಯ ಒದಗಿದೆ ಎಂದು ಹೇಳಿದರು.

ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಕಾಂ| ಜಿ. ಜಯರಾಂ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಕಾಂ| ರಮಣಾರೆಡ್ಡಿ ಸ್ವಾಗತಿಸಿದರು. ಕಾಂ। ಮಹಾದೇವು ವಂದನಾರ್ಪಣೆ ಮಾಡಿದರು.

○

ದಾಂಡೆಲಿ :

ಡಿ. ವೈ. ಎಫ್. ಐ. ಜಿಲ್ಲಾ ಘಟಕಕ್ಕೆ ನೂತನ ಪದಾಧಿಕಾರಿಗಳು

13-8-82 ರಂದು ಡಿ.ವೈ.ಎಫ್.ಐ. ಜಿಲ್ಲಾ (ಉತ್ತರ ಕನ್ನಡ) ಘಟಕದ ಸಭೆಯು ದಾಂಡೇಲಿಯಲ್ಲಿ ಜರುಗಿತು. 1982–83ನೇ ಸಾಲಿಗೆ ಈ ಕೆಳಕಂಡವರನ್ನು ಪದಾಧಿಕಾರಿಗಳನ್ನಾಗಿ ಆಯ್ಕೆ ಮಾಡಲಾಯಿತು.

ಅಧ್ಯಕ್ಷರಾಗಿ ಕಾಂ| ಜಿ. ಆರ್. ನಾಯಕ್, ಪ್ರಧಾನ ಕಾರ್ಯದರ್ಶಿಯಾಗಿ ಕಾಂ| ಮನೋಹರ ಜನ್ನು ಹಾಗೂ ಖಜಾಂಚಿಯಾಗಿ ಕಾಂ| ಜಿ. ವಿ. ನಾಯಕ್ ಇವರುಗಳು ಆಯ್ಕೆಯಾಗಿದ್ದಾರೆ.

ನೆರೆ ಪರಿಹಾರ ಸಮಿತಿ :

ಇತ್ತೀಚೆಗೆ ನೆರೆ ಹಾವಳಿಯಿಂದಾಗಿ ಉಂಟಾದ ಪರಿಸ್ಥಿತಿಯನ್ನು ಚರ್ಚಿಸಿದ ಸಭೆಯು 17–8–82 ರಂದು, ಪರಿಹಾರ ಸಮಿತಿಯನ್ನು ರೂಪಿಸಲು ಎಲ್ಲ ವಿಭಾಗಗಳ ಜನತೆಯನ್ನು ಆಹ್ವಾನಿಸಬೇಕೆಂದು ತೀರ್ಮಾನಿಸಿತು.

ಅಂತೆಯೇ, 17–8–82 ರಂದು ದಾಂಡೇಲಿಯ ಎಲ್ಲ ಸಂಘ ಸಂಸ್ಥೆಗಳ, ಉದ್ಯಮಗಳ ಪ್ರತಿನಿಧಿಗಳ, ನಾಗರಿಕರ ಹಾಗೂ ಎಲ್ಲ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಭೆ ಕರೆಯಲಾಗಿತ್ತು. ಒಟ್ಟು ನಲ್ವತ್ತು ಪ್ರತಿನಿಧಿಗಳಿಂದ ಕೂಡಿದ 'ನೆರೆ ಪರಿಹಾರ ಸಮಿತಿ' ಯೊಂದನ್ನು ರಚಿಸಲಾಯಿತು.

ಈ ಮೇಲ್ಕಾಣಿಸಿದ ಸಭೆಯ ಅಧ್ಯಕ್ಷತೆಯನ್ನು ಬಂಗೂರ ನಗರ ಕಲಾ, ವಿಜ್ಞಾನ ವಾಣಿಜ್ಯ ಮಹಾವಿದ್ಯಾಲಯದ ಪ್ರಿನ್ಸಿಪಾಲರಾದ ಶ್ರೀ ಎಸ್. ಜಿ. ಸಭಾಯಿತರು ಅಧ್ಯಕ್ಷತೆ ವಹಿಸಿದ್ದರು. ಡಿ.ವೈ.ಎಫ್.ಐ.ನ ಸುರೇಂದ್ರ ರಾಮನ್ ಸ್ವಾಗತಿಸಿದರು. ಕಾಂ| ಮನೋಹರ ಜನ್ನು ಆಭಾರ ಮನ್ನಿಸಿದರು.

ತುಮಕೂರು :

ಉಪನ್ಯಾಸ ಕಾರ್ಯಕ್ರಮ

7–8-82 ರಂದು ತುಮಕೂರಿನ ಸಮುದಾಯ ಬಳಗದ ವತಿಯಿಂದ 'ಭಾರತಕ್ಕೆ ಅಂತರ್ರಾಷ್ಟ್ರೀಯ ವಿತ್ತ ನಿಧಿ (ಐ.ಎಂ.ಎಫ್.)ಯಿಂದ ಸಾಲ' ಎಂಬ ವಿಷಯದ ಕುರಿತು ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಸಿದ್ಧಗಂಗಾ ಸಂಜೆ ಕಾಲೇಜು ಸಭಾಂಗಣದಲ್ಲಿ ನಡೆದ ಸಭೆಯನ್ನುದ್ದೇಶಿಸಿ ಶ್ರೀಶಿವನಂಜಯ್ಯ (ಸಿದ್ಧಗಂಗಾ ಸಂಜೆ ಕಾಲೇಜಿನ ಪ್ರಿನ್ಸಿಪಾಲರು) ಮಾತನಾಡಿದರು.

ಸಭೆಯಲ್ಲಿ ವಿದ್ಯಾರ್ಥಿಗಳು, ಅಧ್ಯಾಪಕರು ಮುಂತಾದವರು ಆಗಮಿಸಿದ್ದರು.

○

ಕನ್ನಡ ಅಲ್ಪಸಂಖ್ಯಾತರಿಗೆ ಬೆಂಬಲ

ಮಹಾರಾಷ್ಟ್ರದಲ್ಲಿ ನೂತನ ಕನ್ನಡ ಶಾಲೆಗಳನ್ನು ಪ್ರಾರಂಭಿಸುವುದರ ಮೇಲೆ ವಿಧಿಸಿರುವ ನಿಷೇದಾಜ್ಞೆಯನ್ನು ಕೂಡಲೇ ಹಿಂತೆಗೆದುಕೊಳ್ಳಬೇಕೆಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್. ಎಫ್.ಐ.) ಕರ್ನಾಟಕ ಶಾಖೆಯು ಮಹಾರಾಷ್ಟ್ರ ಸರ್ಕಾರವನ್ನು ಮತ್ತು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ. ಯಾವುದೇ ರಾಜ್ಯದಲ್ಲೂ ವಿದ್ಯಾರ್ಥಿಗಳಿಗೆ ತಮ್ಮ ಮಾತೃಭಾಷೆಯ ಮಾಧ್ಯಮದಲ್ಲಿ ಶಿಕ್ಷಣ ಪಡೆಯಲು ಅಗತ್ಯ ಅನುಕೂಲ ಕಲ್ಪಿಸಿಕೊಡುವುದು ಆಯಾ ರಾಜ್ಯ ಸರ್ಕಾರಗಳ ಸಂವಿಧಾನಬದ್ಧ ಕರ್ತವ್ಯವಾಗಿದ್ದು, ಮಹಾರಾಷ್ಟ್ರ ಸರ್ಕಾರದ ಪ್ರಜಾಪ್ರಭುತ್ವ ವಿರೋಧಿ ಧೋರಣೆಯನ್ನು ಎಸ್. ಎಫ್. ಐ. ತೀವ್ರವಾಗಿ ಖಂಡಿಸುತ್ತದೆ ಎಂದು ಕಾಂ| ಆರಾಧ್ಯ ತಿಳಿಸಿದ್ದಾರೆ.

●

ಇರಾನ್ ವಿದ್ಯಾರ್ಥಿಗಳ ಮೇಲಿನ ಹಲ್ಲೆಯ ಖಂಡನೆ

ಖೊಮೇನಿ ಪರ ವಿದ್ಯಾರ್ಥಿಗಳು ತಮ್ಮ ವಿರೋಧಿ ಗುಂಪಿನ ಇಬ್ಬರು ಇರಾನಿ ವಿದ್ಯಾರ್ಥಿಗಳ ಮೇಲೆ ನಡೆಸಿರುವ ಹಲ್ಲೆಯನ್ನು, ಈ ಸಂದರ್ಭದಲ್ಲಿ ಪೋಲಿಸರ ನಿಷ್ಕ್ರಿಯತೆಯನ್ನು ಎಸ್. ಎಫ್. ಐ. ಖಂಡಿಸಿದೆ. ಇರಾನಿ ವಿದ್ಯಾರ್ಥಿಗಳ ನಡುವಿನ ಘರ್ಷಣೆಗಳನ್ನು ತಡೆಯಲು ನಿರಪರಾಧಿ ವಿಧ್ಯಾರ್ಥಿಗಳಿಗೆ ರಕ್ಷಣೆ ಒದಗಿಸಲು ಪೋಲಿಸ್ ಇಲಾಖೆಯು ತಕ್ಷಣ ಅಗತ್ಯಕ್ರಮ ತೆಗೆದುಕೊಳ್ಳಬೇಕೆಂದು ಸಹ ಎಸ್. ಎಫ್. ಐ ಒತ್ತಾಯಿಸಿದೆ.

"ಸಂಬಂಧಗಳು" ಪುಸ್ತಕದ ಸಂಬಂಧಗಳು

ಪಧವಿ ಪೂರ್ವ ಶಿಕ್ಷಣ ಮಂಡಳಿಯ ದ್ವಿತೀಯ ಪಿ. ಯು. ಸಿ. ತರಗತಿಗೆ 82 - 83ನೇ ಸಾಲಿನ ಉಪಪಠ್ಯ ಪುಸ್ತಕವಾಗಿ ಗೊತ್ತುಪಡಿಸಿದ್ದ "ಸಂಬಂಧಗಳು" ಎಂಬ ಕಥಾಸಂಕಲನ ಭಾರೀ ವಿವಾದದ ಅಲೆಗಳಲ್ಲಿ ಮುಳುಗಿ ಹೋಯಿತು. ಕತೆಗಾರರ ಒಪ್ಪಿಗೆ ಪಡೆದಿಲ್ಲವೆಂಬ ಕಾರಣಕ್ಕಾಗಿ ಪ್ರಾರಂಭದಲ್ಲಿಯೇ ಗದ್ದಲವುಂಟಾಯಿತು. ಸಾಹಿತಿಗಳು ಬಂಡಾಯ ಸಾಹಿತ್ಯ ಸಂಘಟನೆಯ ನೇತೃತ್ವದಲ್ಲಿ ತಮ್ಮ ಹಕ್ಕುಗಳ ಸಮರ್ಥನೆಗೆ ಪ್ರತಿಭಟಿಸಿದರು. ತದನಂತರ ಪಿ. ಯು. ಸಿ. ಮಂಡಳಿಯು ಕತೆಗಾರರಿಗೆ ಮಾನ್ಯತೆ, ಸಂಭಾವನೆ ನೀಡಲು ಒಪ್ಪಿಕೊಂಡಿತು. ಇಲ್ಲಿಗೆ ಸಂಬಂಧಗಳ ಕತೆಗೆ ಒಂದು ತೆರೆ ಬಿದ್ದಿತು.

ಈ ವಿವಾದದ ಅಲೆಯ ಬೆನ್ನಿನಲ್ಲೇ ಮತ್ತೊಂದು ದೊಡ್ಡ ಅಲೆ ಎದ್ದಿತು. 'ಜ್ಞಾನ–ಶೀಲ–ಏಕತೆ' ಧ್ಯೇಯದ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ (ಎ.ಬಿ.ವಿ.ಪಿ.) ಎಂಬ ವಿದ್ಯಾರ್ಥಿ ಸಂಘಟನೆಯು ಇದೊಂದು ಅಶ್ಲೀಲ ಸಾಹಿತ್ಯವೆಂದು ಜರಿದು ಪುಸ್ತಕವನ್ನು ರದ್ದುಗೊಳಿಸಬೇಕೆಂದು ಕೆಲವೆಡೆ ವಿದ್ಯಾರ್ಥಿಗಳನ್ನು ಬೀದಿಗಿಳಿಸಿತು. ಇದರೊಂದಿಗೆ ಇನ್ನೂ ಕೆಲವು 'ಶೀಲವಂತರು' ಮತ್ತು 'ಶೀಲ'ದ ಗುತ್ತಿಗೆದಾರ ಎ.ಕೆ. ಸುಬ್ಬಯ್ಯನವರೂ ಇದಕ್ಕೆ ಧನಿಗೂಡಿಸಿದರು. ಆದರೆ ಭಾರತೀಯ ಜನತಾ ಪಕ್ಷದ ಮುಖಂಡ ಎ. ಕೆ. ಸುಬ್ಬಯ್ಯನವರು ವಿಧಾನ ಸಭೆಯಲ್ಲಿ ಮಾಡಿದ ಭಾಷಣದ ಸಾರಾಂಶ ಹೊರಬಿದ್ದಾಗ 'ಶ್ಲೀಲ—ಅಶ್ಲೀಲ'ದ ಕೃತಕ ತೆರೆಯು ಸರಿದು ಇದರ ಹಿಂದೆ ಅಡಗಿರುವ ಮೂಲ ಸ್ವರೂಪದ ನಗ್ನತೆ ಬಟ್ಟಬಯಲಾಯಿತು. ಪ್ರಾರಂಭದಲ್ಲಿ ಶಿಕ್ಷಣ ಮಂತ್ರಿ ಶ್ರೀ ಬಿ. ಜಿ. ಶಂಕರರಾವ್‌ರವರು "ಪುಸ್ತಕದಲ್ಲಿರುವ ಅಶ್ಲೀಲದ ಆಪಾದನೆಗೊಳಗಾಗಿರುವ ಕೆಲವು ಶಬ್ಧಗಳನ್ನು, ಭಾಗಗಳನ್ನು ತೆಗೆದು ಹಾಕಿದರೆ ಸಾಕು" ಎಂದು ಹೇಳಿದರು. ಪಿ ಯು. ಸಿ. ಮಂಡಳಿ ನಿರ್ದೇಶಕರು ಈ ಸಂಬಂಧದಲ್ಲಿ ಎಲ್ಲಾ ಕಾಲೇಜುಗಳಿಗೆ ಸೂಚನೆಯೊಂದನ್ನು ಸಹ ಕಳುಹಿಸಿದ್ದರು. ಆದರೆ ಎ ಕೆ. ಸುಬ್ಬಯ್ಯನವರು ತಮ್ಮ ಭೀಷಣವಾದ ಭಾಷಣವನ್ನು ಮುಂದುವರಿಸಿ "ಈ ಪುಸ್ತಕವು ವಿದ್ಯಾರ್ಥಿಗಳಲ್ಲಿ ಜಾತಿ ಸಂಘರ್ಷ ಮತ್ತು ವರ್ಗ ಸಂಘರ್ಷ ಭಾವನೆಗಳನ್ನು ಬಿತ್ತುತ್ತದೆ" ಎಂದು ಗುಡುಗಿದಾಗ ಸಮಾಜವಾದಿ ಪರಿವರ್ತನೆಯ ಗುರಿಯನ್ನು ಹೊಂದಿರುವ (?) ಕಾಂಗ್ರೆಸ್ (ಐ) ಸರ್ಕಾರದ ಮಂತ್ರಿ ಶಂಕರರಾವ್‌ರವರಿಗೆ ಜಂಘಾಬಲವೇ ಉಡುಗಿ ಹೋಗಿ "ಹಾಗಿದ್ದರೆ ಪುಸ್ತಕವನ್ನು ಹಿಂತೆಗೆದುಕೊಳ್ಳುತ್ತೇನೆ" ಎಂದು ಒಪ್ಪಿಕೊಂಡರು. ಈಗ ಯೋಚಿಸಿ ನೋಡಿ, "ಸಂಬಂಧಗಳು" ಪುಸ್ತಕದ ಸಂಬಂಧಗಳನ್ನು.

ಸಂಬಂಧಗಳು ಪುಸ್ತಕದ ರದ್ಧತಿಗೆ ಮಾನ್ಯ ಶಿಕ್ಷಣ ಮಂತ್ರಿ ಶಂಕರರಾವ್‌ರವರು ಒಪ್ಪಿದ್ದು "ಪ್ರಗತಿಪರ" ಮುಖವಾಡದ ಇಂದಿರಾಕಾಂಗ್ರೆಸ್‌ನ ಸಂಧರ್ಭಸಾಧಕತನಕ್ಕೆ ಸಾಕ್ಷಿಯಾಗಿದೆ. ಶ್ರೀಮತಿ ಇಂದಿರಾ ಗಾಂಧಿಯವರು ತಮ್ಮ ಭಾಷಣಗಳಲ್ಲಿ ಆರೆಸ್ಸೆಸ್‌ನ ಮೇಲೆ ಕಿಡಿಕಾರುತ್ತಿರುತ್ತಾರೆ. ಕೃತಿಯಲ್ಲಿ ಸಂಧರ್ಬ ಬಂದಾಗ ಆರೆಸ್ಸೆಸ್ ಪ್ರತಿಗಾಮಿಯೊಂದಿಗೆ ಸಂಧಾನ ಮಾಡಿಕೊಳ್ಳುವ ಕಾಂಗ್ರೆಸ್ (ಐ)ನ ಧೋರಣೆಗೆ ಇದೊಂದು ಉತ್ತಮ ನಿದರ್ಶನವಾಗಿದೆ.

ಒಟ್ಟಾರೆ ಕತೆಗಳಲ್ಲಿನ ವಸ್ತುವನ್ನು, ಧೋರಣೆಯನ್ನು ಗಮನಿಸಿದಲ್ಲಿ ಗ್ರಾಮೀಣ ಸಮಾಜದಲ್ಲಿನ ವರ್ಗ ಸಂಬಂಧಗಳು, ಜಾತಿ ಪದ್ಧತಿಯ ಅನಿಷ್ಟ, ಮಾನವೀಯ, ಸಾಮಾಜಿಕ ಸಂಬಂಧಗಳ ನೈಜ ಚಿತ್ರಣದ ಪ್ರಯತ್ನವಿದೆ. ಇದರೊಂದಿಗೆ ಹೊಸ ಪರಿವರ್ತನೆಗೆ ಪ್ರೇರಣೆಯಿದೆ. ಕತೆಗಳು ಗ್ರಾಮೀಣ ಜನರ ಬದುಕಿನ ಸ್ಪಂಧನಗಳಾಗಿವೆ. ಇಂದಿನ ಯುವಜನಾಂಗದಲ್ಲಿ ಪ್ರಗತಿಪರ ದೃಷ್ಟಿಕೋನದ ವೈಚಾರಿಕ ಚಿಂತನೆಯನ್ನು ಬೆಳೆಸಲು ಉತ್ತೇಜಿಸಬಹುದಾಗಿದ್ದ, ಹೊಸ ಸಂಬಂಧಗಳಿಗಾಗಿ ಹಂಬಲಿಸಿದ್ದ "ಸಂಬಂಧಗಳು" ಪುಸ್ತಕವನ್ನು ಸರ್ಕಾರವು ರದ್ದು ಮಾಡಿರುವುದು ತೀರಾ ಖಂಡನೀಯ.

—ಎಸ್.ಆರ್.ಆರಾಧ್ಯ

ಗುಲ್ಬರ್ಗಾ :

ಬೇಡಿಕೆಗೆ ಒತ್ತಾಯಿಸಿ ನಿಯೋಗ

ಗುಲ್ಬರ್ಗಾ ನಗರದಲ್ಲಿ ಮಹಿಳೆಯರಿಗೆ ಮೂತ್ರಾಲಯಗಳಿಲ್ಲದೇ ಮಹಿಳೆಯರ ಪರದಾಟ ಹೇಳತೀರದು. ಸೂಪರ್ ಮಾರ್ಕೆಟ್ ವಿಭಾಗದ ಮತ್ತಿತರ ಕಡೆಯ ಕಚೇರಿಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಮತ್ತು ಸಾರ್ವಜನಿಕ ಸ್ತ್ರೀಯರಿಗೆ ಮೂತ್ರಾಲಯದ ಅವಶ್ಯಕತೆ ತುಂಬ ಇದೆ.

ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಕಾರ್ಯಕರ್ತೆಯರು, ಅವಶ್ಯವಿರುವ ಸ್ಥಳಗಳಲ್ಲಿ ಮೂತ್ರಾಲಯ ಕಟ್ಟಿಸಬೇಕೆಂದು ಒತ್ತಾಯಿಸಿ 3-8-82 ರಂದು ಮಹಾನಗರಸಭೆ ಅಧಿಕಾರಿ ಶ್ರೀ ಡಿ ಎ. ನಾಯ್ಕರವರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು. ಮನವಿಯನ್ನು ಆಲಿಸಿದ ಅಧಿಕಾರಿಗಳು ಬೇಡಿಕೆಯನ್ನು ತಕ್ಷಣ ಈಡೇರಿಸುವ ಭರವಸೆ ನೀಡಿದರು.

ಮನವಿಯನ್ನು ಅರ್ಪಿಸಲು ತೆರಳಿದ್ದ ನಿಯೋಗದಲ್ಲಿ ಲಲಿತಾ ಮಹಾಂತಪುರ, ಕೆ. ಶರೀಫಾ, ಜಗದೇವಿ, ಗೋದಾವರಿ ಹುಡಗಿ, ದೇವಿಂದ್ರಮ್ಮ, ಶಕುಂತಲಾ ಸುಲೋಚನಾ ಇವರುಗಳಿದ್ದರು.

ರೈತ ಸಂಘದ ಚಟುವಟಿಕೆಗಳು :

ಊರುಕೆರೆ :

16-8-82 ರಂದು ತುಮಕೂರು ಕಸಬಾ ಊರುಕೆರೆ ಗ್ರೂಪ್ ಪಂಚಾಯತ್ ಮಟ್ಟದ 'ರೈತ-ಕೃಷಿ ಕೂಲಿಗಾರರ ಮತ್ತು ಕಾರ್ಮಿಕರ' ಸಂಘದ ಸಭೆ ಸೇರಿ ಈ ಕೆಳಕಂಡ ನಿರ್ಣಯಗಳನ್ನು ಅಂಗೀಕರಿಸಲಾಗಿದೆ.

ಊರುಕೆರೆ ಗ್ರೂಪ್ ಪಂಚಾಯತಿಗೆ ಸೇರಿದ ಸ. ನಂ. 74 ಮತ್ತು 75ನೇ ಸರಕಾರಿ ಜಮೀನನ್ನು ತುಮಕೂರು ತಾಲ್ಲೂಕಿನ ಮರಳೂರು ಗ್ರಾಮಕ್ಕೆ ಸೇರಿದ ಜಮೀನನ್ನು ಪಡೆದಿದ್ದ ತುಮಕೂರಿನ ಕೆಲವು ಜಮೀನುದಾರರಿಗೆ, ತಾಲ್ಲೂಕಿನ ಖಾಸಗೀ ವಿದ್ಯಾ ಸಂಸ್ಥೆಯ ಪ್ರಭಾವಿ ಪುಡಾರಿಯೊಬ್ಬರು ಕಂದಾಯ ಮಂತ್ರಿಗಳಲ್ಲಿ ಪ್ರಭಾವ ಬೀರಿ, ಊರುಕೆರೆಯ ಜಮೀನನ್ನು ಮಂಜೂರು ಮಾಡಿಸಲು ಸಂಚು ನಡೆಸಿರುವುದನ್ನು ಸಂಘವು ಪ್ರತಿಭಟಿಸಿದೆ.

ಈ ಜಮೀನನ್ನು ಕೆಲವು ಬಡರೈತರು ಉಳುಮೆ ಮಾಡುತ್ತಿದ್ದು, ಅವರಿಗೇ ಟಿ. ಟಿ. ಹಾಕಿ, ಪಹಣಿ ಬರೆಸಿ ಕಾಯಂ ಮಾಡಿಕೊಡಬೇಕೆಂದೂ, ಉಳಿದ ಜಮೀನನ್ನು ಹರಿಜನ - ಗಿರಿಜನರಿಗೆ ನಿವೇಶನಗಳನ್ನು ಹಂಚಲೂ, ಊರುಕೆರೆಯಲ್ಲಿ ನೂತನವಾಗಿ ಪ್ರಾರಂಭಿಸಿರುವ ಸರಕಾರಿ ಪ್ರೌಢ ಶಾಲೆಗೆ ಕಟ್ಟಡ ಕಟ್ಟಲು ಮತ್ತು ಕೆಲವೊಂದು ಭಾಗವನ್ನು ಗೋಮಾಳವನ್ನಾಗಿ ಉಳಿಸಿಕೊಡಬೇಕೆಂದೂ ಸಂಘವು ಕೇಳಿಕೊಂಡಿದೆ.

ವ್ಯವಸಾಯ ಇಲಾಖೆಯಿಂದ ಹರಿಜನ-ಗಿರಿಜನ ರೈತ-ಕೃಷಿ ಕೂಲಿಗಾರರಿಗೆ ರಾಜ್ಯ ಮತ್ತು ಕೇಂದ್ರ ಸರಕಾರಗಳಿಂದ ಒದಗಿಸಲ್ಪಡುತ್ತಿರುವ 'ವಿಶೇಷ ಸೌಲಭ್ಯ 'ಯೋಜನೆ'ಯಡಿಯಲ್ಲಿನ ಪ್ರಯೋಜನಗಳನ್ನು ಟಿ.ಡಿ.ಬಿ.ಯವರು ಇಲ್ಲಿನ ಕೆಲವು ಹಳ್ಳಿಗಳಿಗೆ ಒದಗಿಸಿಲ್ಲ. ಕಾರಣ ಕೂಡಲೇ ಅರ್ಹ ಬಡ ಹರಿಜನ-ಗಿರಿಜನ ರೈತ ಕೃಷಿ ಕೂಲಿಗಾರರಿಗೆ ಎಲ್ಲ ಬಗೆಯ ನೆರವು ನೀಡಬೇಕೆಂದು ಜಿಲ್ಲಾಧಿಕಾರಿಗಳನ್ನು ಕೋರಲಾಗಿದೆ.

ಗುಳ್ಳಹಟ್ಟಿ :

ಬೆಂಗಳೂರು ಜಿಲ್ಲೆಯ ಕನಕಪುರ ತಾಲ್ಲೂಕಿನ ಗುಳ್ಳಹಟ್ಟಿ ಕಾವಲಿನಲ್ಲಿ ರೈತ ಸಂಘದ ಗ್ರಾಮ ಸಮಿತಿಯ ಸಭೆ ಸೇರಿತ್ತು. ಈಗಾಗಲೇ ಸಾಗುವಳಿ ಮಾಡುತ್ತಿರುವ ಅರಣ್ಯ ಭೂಮಿಗೆ ಪಟ್ಟ ಕೊಡದಿರುವುದನ್ನು ಗಮನಿಸಿದ ಸಭೆಯು, ಕೂಡಲೇ ಭೂಮಿಯನ್ನು ಕಾಯಂ ಮಾಡಬೇಕೆಂದು ಒತ್ತಾಯಿಸಿತು.

ಬೇಡಿಕೆ ಕಾರ್ಯಗತವಾಗದಿದ್ದಲ್ಲಿ ಸೆಪ್ಟೆಂಬರ್ ಕೊನೆಯ ವಾರದಲ್ಲಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಅರಣ್ಯಾಧಿಕಾರಿಗಳ ಕಚೇರಿಗಳ ಎದುರು ಧರಣಿ ಸತ್ಯಾಗ್ರಹ ನಡೆಸಲು ತೀರ್ಮಾನಿಸಲಾಯಿತು.

ಪ್ರಾಂತ ರೈತ ಸಂಘದ ಕರೆಯ ಮೇರೆಗೆ ನಡೆಯಲಿರುವ 'ವಿಧಾನ ಸೌಧ ಚಲೋ' ಕಾರ್ಯಕ್ರಮ ಯಶಸ್ವಿ ಮಾಡಬೇಕೆಂದೂ, ಮನವಿಗೆ ಒಂದು ಸಾವಿರ ಸಹಿ ಸಂಗ್ರಹಿಸಬೇಕೆಂದೂ ಸಭೆಯಲ್ಲಿ ತೀರ್ಮಾನಿಸಲಾಯಿತು.

ಜಿಲ್ಲಾ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ| ಲಕ್ಕಣ್ಣ ಮತ್ತು ಕಾಂ| ವೆಂಕಟಾಚಲಯ್ಯ ಇವರು ಸಭೆಯನ್ನುದ್ದೇಶಿಸಿ ಮಾತನಾಡಿ, ರೈತ ಸಂಘವನ್ನು ಬಲಪಡಿಸಲು ಕೋರಿದರು.

ಮಂಟನ ಕುರ್ಚೆ :

ನೆಲಮಂಗಲ ತಾಲ್ಲೂಕಿನ ಮಂಟನ ಕುರ್ಚೆ ಗ್ರಾಮದಲ್ಲಿ 21-8.82 ರಂದು ರೈತರ ಸಭೆ ಸೇರಿತು. ಸಭೆಯನ್ನುದ್ದೇಶಿಸಿ ಕಾಂ|ಲಕ್ಕಣ್ಣ, ಶ್ರೀರಾಮರೆಡ್ಡಿ, ಶಿವರಾಂ ಮತ್ತು ಕಾಂ| ಎಲ್.ಸಿ. ನಾಗರಾಜ್ ಅವರುಗಳು ಮಾತನಾಡಿ ಗ್ರಾಮಾಂತರ ಪ್ರದೇಶಗಳಲ್ಲಿ ರೈತ ಸಂಘಟನೆಯನ್ನು ಬಲಪಡಿಸುವ ಅಗತ್ಯದ ಕುರಿತು ವಿವರಿಸಿದರು. 'ಈ ಪ್ರದೇಶದ ಕೆಲವು ಸಮಸ್ಯೆಗಳ ಪರಿಹಾರಕ್ಕೆ ಸಂಘಟಿತರಾಗಿ ಹೋರಾಟ ನಡೆಸುವಂತೆ ಮನವಿ ಮಾಡಿದರು.

ನಂತರ ಈ ಕೆಳಕಂಡವರನ್ನೊಳಗೊಂಡ ಗ್ರಾಮ ಸಮಿತಿಯನ್ನು ರಚಿಸಲಾಯಿತು :

ಅಧ್ಯಕ್ಷರಾಗಿ ವರದಯ್ಯ, ಕಾರ್ಯದರ್ಶಿಯಾಗಿ ಎಲ್. ಸಿ. ವಸಂತಯ್ಯ ಹಾಗೂ 15 ಜನರ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು. ಸಭೆಯಲ್ಲಿ ರೈತ ಕಾರ್ಮಿಕ ಮುಖಂಡ ಕಾಂ| ಮಹಮ್ಮದ್ ದಸ್ತಗೀರ್ ಅವರೂ ಪಾಲ್ಗೊಂಡಿದ್ದರು.

ಚಿಕ್ಕನಾಯ್ಕನಹಳ್ಳಿ : ರೈತರ ಪಾದಯಾತ್ರೆ

12-8-82 ರಂದು ತುಮಕೂರು ಜಿಲ್ಲೆಯ ಚಿಕ್ಕನಾಯ್ಕನಹಳ್ಳಿ ತಾಲ್ಲೂಕಿನ ಗಂಟೇನಹಳ್ಳಿಯಿಂದ ರೈತರು ತಿಮ್ಮನಹಳ್ಳಿ ಕಂದಿಕೆರೆ ಮಾರ್ಗವಾಗಿ ತಾಲ್ಲೂಕು ಕೇಂದ್ರ ಚಿಕ್ಕನಾಯ್ಕನಹಳ್ಳಿಗೆ ತೆರಳಿ ತಹಸೀಲ್ದಾರರಿಗೆ ಮನವಿ ಸಲ್ಲಿಸಿದರು.

7-8 ವರ್ಷಗಳಿಂದಲೂ ಗಂಟೇನಹಳ್ಳಿ ರೈತರು ಸಾಗುವಳಿ ಮಾಡುತ್ತಿರುವ ಸರಕಾರಿ ಜಮೀನಿಗೆ ಇನ್ನೂವರೆಗೆ ಫಹಣಿ ವಗ್ಯೆರೆ ದಾಖಲಾತಿ ಸಿಕ್ಕಿಲ್ಲ. ಈ ಕೂಡಲೇ ಜಮೀನು ಮಂಜೂರು ಮಾಡುವ ದಾಖಲಾತಿ ಒದಗಿಸಬೇಕೆಂದು ಒತ್ತಾಯಿಸಿ 24 ಕಿ.ಮಿ. ದೂರ ಪಾದಯಾತ್ರೆ ನಡೆಸಿದರು. ಕಾಂ| ಎಚ್. ಸಿ. ಚನ್ನಪ್ಪ, ಆದಂಖಾನ್, ಜಾಹೇದಾಬಿ, ಜಯಣ್ಣ, ಜಯಮ್ಮ, ಸಣ್ಣರಂಗಯ್ಯ ಇವರು ಪಾದಯಾತ್ರೆಯ ನೇತೃತ್ವ ವಹಿಸಿದ್ದರು.

ನೆರೆ ಸಂತ್ರಸ್ತರಿಗೆ ಯೋಗ್ಯ ಪರಿಹಾರ ನೀಡಲು ಸಿ.ಪಿ.ಐ.(ಎಂ)ನ ತಾಲ್ಲೂಕು ಸಮಿತಿಯ ಒತ್ತಾಯ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕುಂದಾಪುರ ತಾಲ್ಲೂಕು ಸಮಿತಿಯು ತಾರೀಕು 5-8-1982 ರಂದು ಕಾಮ್ರೇಡ್ ಅಬ್ರಹಾಂ ಕರ್ಕಡರವರ ಅಧ್ಯಕ್ಷತೆಯಲ್ಲಿ ಸೇರಿ, ಭೀಕರ ನೆರೆಯಲ್ಲಿ ಭಾರೀ ಕಷ್ಟ-ನಷ್ಟಗಳಿಗೆ ಒಳಗಾದ ಸಂದರ್ಭದಲ್ಲಿ ಜನರನ್ನು ಹಾಗೂ ಅವರ ಸೊತ್ತುಗಳನ್ನು ಸುರಕ್ಷಿತವಾದ ಸ್ಥಳಗಳಿಗೆ ಸಾಗಿಸಲು ಸತತವಾಗಿ ಶ್ರಮಿಸಿದ ಪಕ್ಷದ ಸದಸ್ಯರನ್ನು ಮತ್ತು ಕಾರ್ಮಿಕರನ್ನೂ ಅಭಿನಂದಿಸಿದೆ

ನೆರೆ ಸಂತ್ರಸ್ತರಿಗೆ ಯೋಗ್ಯ ಪರಿಹಾರ ತುರ್ತಾಗಿ ನೀಡಿ, ಪುನರ್ನಿವೇಶನದ ವ್ಯವಸ್ಥೆ ಕೂಡಲೇ ಮಾಡಬೇಕೆಂದು ಸರಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಅಂಗೀಕರಿಸಿ, ಒಂದು ದಿನದ ಕೂಲಿಯನ್ನು "ನೆರೆ ಪರಿಹಾರ ಸಮಿತಿಯ ಮೂಲಕ" ನೆರೆ ಸಂತ್ರಸ್ತರಿಗೆ ಕೊಡಬೇಕೆಂದು ನಿರ್ಧರಿಸಿ ಕಾರ್ಮಿಕರಿಗೆ ಸಂಗ್ರಹಿಸುವಂತೆ ಕರೆ ನೀಡಿರುತ್ತದೆ.

ಈಗಾಗಲೇ ರಚಿಸಲ್ಪಟ್ಟ "ನೆರೆ ಪರಿಹಾರ ಸಮಿತಿ"ಯನ್ನು ಪುನರ್‌ರಚಿಸಿ ನೆರೆ ಸಂತ್ರಸ್ತರಿಗೆ ಯಾವ ರೀತಿಯ ವಂಚನೆಯಾಗದೇ ಪರಿಹಾರವನ್ನು ನೀಡಲು ಅನುಕೂಲವಾಗುವ ರೀತಿಯಲ್ಲಿ ಎಲ್ಲಾ ವಿಭಾಗದ ಜನರ ಪ್ರತಿನಿಧಿಕರಿಸುವವರನ್ನು ಸೇರಿಸಿ, ಸಮಿತಿಯೊಂದನ್ನು ರಚಿಸಲು ಸರಕಾರವನ್ನು ಒತ್ತಾಯಿಸಿದೆ.

○

ಪಾರ್ಟಿಗೆ ಕೊಡುಗೆ

ಶಿವಮೊಗ್ಗದ ಕಾಂ| ಲಕ್ಷ್ಮೀನಾರಾಯಣ ಅವರು 8-8-82 ರಂದು ತಮ್ಮ ಹೊಸ ಗೃಹ ಪ್ರವೇಶದ ಸವಿನೆನಪಿಗೆ ಪಾರ್ಟಿಗೆ 50 ರೂ. ಕೊಡುಗೆ ಕೊಟ್ಟಿದ್ದಾರೆ.

●

ಯಲಹಂಕ-ಬಂಗಾರುಪೇಟೆ (ನ್ಯಾರೋಗೇಜ್) ರೈಲು ಮಾರ್ಗದ ಅವ್ಯವಸ್ಥೆ

ಯಲಹಂಕ ಬಂಗಾರುಪೇಟೆ ನ್ಯಾರೋಗೇಜ್ ರೈಲು ಮಾರ್ಗದ ಉದ್ದವು 149 ಕಿ.ಮೀ.ಗಳು. ಈ ದೂರವನ್ನು ಕೇವಲ ಬಸ್ಸಿನಷ್ಟೇ ಇರುವ ಎರಡು ಪೆಟ್ಟಿಗೆಗಳನ್ನು ಹೊತ್ತ ಡೀಸಲ್ ಇಂಜನ್ ಗಂಟೆಗೆ 30 ಕಿ.ಮೀ. ವೇಗದಲ್ಲಿ ಚಲಿಸುವುದು. ಪ್ರತಿ ನಿಲ್ದಾಣದಲ್ಲೂ ಕನಿಷ್ಟ 5 ನಿಮಿಷಗಳಿಂದ 20 ನಿಮಿಷಗಳು ತಂಗುವುದು. ಈ ಪ್ರಯಾಣದಿಂದ ಪ್ರಯಾಣಿಕರಿಗೆ ಅಪಾರ ತೊಂದರೆ.

ಇರುವ ನಾಲ್ಕು ಡೀಸಲ್ ಇಂಜನ್‌ಗಳಲ್ಲಿ (1) ಯಲಹಂಕ ಚಿಕ್ಕಬಳ್ಳಾಪುರ ಮಧ್ಯೆ ಇರುವ 47 ಕಿ. ಮೀ. ದೂರವನ್ನು ಎರಡು ಸಾರಿ ಓಡಿಸಲು ಒಂದು ಇಂಜನನ್ನು (2) ಕೋಲಾರ ಬಂಗಾರಪೇಟೆ ಮಧ್ಯೆ ಇರುವ 17 ಕಿ.ಮೀ. ದೂರವನ್ನು ಎರಡು ಸಾರಿ ಓಡಿಸಲು ಒಂದು ಇಂಜನನ್ನು (3) ಬಂಗಾರುಪೇಟೆ ಯಲಹಂಕ 149 ಕಿ.ಮೀ ದೂರವನ್ನು ಯಲಹಂಕ ಮತ್ತು ಬಂಗಾರುಪೇಟೆಗಳಿಂದ ಒಂದೊಂದು ಸಾರಿ ಓಡಿಸಲು ಎರಡು ಇಂಜನ್‌ಗಳನ್ನು ರೈಲ್ವೆ ಮಂಡಳಿಯವರು ಉಪಯೋಗಿಸುತ್ತಿದ್ದಾರೆ. ಈ ವ್ಯವಸ್ಥೆಯಿಂದ ಕೋಲಾರ ಚಿಕ್ಕಬಳ್ಳಾಪುರ ಮಧ್ಯೆ ಇರುವ 85 ಕಿ.ಮೀ. ದೂರದ ಪ್ರದೇಶದಲ್ಲಿನ ಜನರು ಬೆಳಗ್ಗೆ ಮತ್ತು ಸಾಯಂಕಾಲದ ರೈಲ್ವೆ ಪ್ರಯಾಣ ಸೌಕರ್ಯದಿಂದ ವಂಚಿತರಾಗಿರುತ್ತಾರೆ. ಇದನ್ನು ಸರಿಪಡಿಸಲು ಮತ್ತು ತಾರತಮ್ಯವಿಲ್ಲದ ಸೇವೆಯನ್ನು ನೀಡುವ ದೃಷ್ಟಿಯಿಂದ ಸಾರ್ವಜನಿಕರು ಅನೇಕ ವ್ಯವಹಾರಗಳ ಬಗ್ಗೆ ಜಿಲ್ಲೆಯ ಕೇಂದ್ರವಾದ ಕೋಲಾರ ಪಟ್ಟಣಕ್ಕೂ ಮತ್ತು ಕರ್ನಾಟಕ ರಾಜ್ಯದ ರಾಜಧಾನಿ ಬೆಂಗಳೂರು ನಗರಕ್ಕೂ ಬೆಳಗ್ಗೆ ತಲುಪಿ ಮತ್ತೆ ಸಂಜೆ ವಾಪಸಾಗಲು ಅನುಕೂಲವಾದ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ಸಾರ್ವಜನಿಕರು ದಕ್ಷಿಣ ರೈಲ್ವೆ ಮಂಡಳಿಯವರನ್ನು ಒತ್ತಾಯಿಸಿದ್ದಾರೆ.

ವೇಗದ ಮಿತಿಯನ್ನು ಹೆಚ್ಚಿಸಿ (1) ಯಲಹಂಕ ಬೆಳಗ್ಗೆ 6-30 ಗಂಟೆಗೆ ಬಿಟ್ಟು ಬೆಳಗ್ಗೆ 9-30 ಗಂಟೆಗೆ ಕೋಲಾರ ತಲುಪುವಂತೆಯೂ (2) ಬಂಗಾರುಪೇಟೆ ಬೆಳಗ್ಗೆ 6-30 ಗಂಟೆಗೆ ಬಿಟ್ಟು ಬೆಳಗ್ಗೆ 9-30 ಗಂಟೆಗೆ ಯಲಹಂಕ ತಲುಪುವಂತೆಯೂ ಮತ್ತು (3) ಯಲಹಂಕ ಸಂಜೆ 6-30 ಗಂಟೆಗೆ ಬಿಟ್ಟು ಬಂಗಾರುಪೇಟೆ ರಾತ್ರಿ 9-30 ಗಂಟೆಗೆ ತಲುಪುವಂತೆಯೂ (4) ಬಂಗಾರುಪೇಟೆ ಸಂಜೆ 6-30 ಗಂಟೆಗೆ ಬಿಟ್ಟು ಯಲಹಂಕ ರಾತ್ರಿ 9-30 ಗಂಟೆಗೆ ತಲುಪುವಂತೆಯೂ ವೇಳಾಪಟ್ಟಿಯಲ್ಲಿ ಬದಲಾವಣೆ ಮಾಡಿ ರೈಲು ಗಾಡಿಗಳನ್ನು ಓಡಿಸುವರೆಂದು ಮತ್ತು ಇರುವ ನಾಲ್ಕು ಡೀಸಲ್ ಇಂಜನ್‌ಗಳನ್ನು ಉಪಯೋಗಿಸಿಕೊಂಡು ಒಂದು ಮೆಯಿಲ್ ಗಾಡಿ ಮತ್ತು ಒಂದು ಎಕ್ಸ್‌ಪ್ರೆಸ್ ಗಾಡಿಯನ್ನು ಓಡಿಸುವ ವ್ಯವಸ್ಥೆ ಮಾಡಬೇಕೆಂದು ವಿನಂತಿಸಿದ್ದಾರೆ.

ನ್ಯಾರೋಗೇಜ್ ರೈಲು ಮಾರ್ಗವನ್ನು ಮೀಟರ್ ಗೇಜಿಗೆ ಪರಿವರ್ತಿಸಿ ಚಿಂತಾಮಣಿಯಿಂದ ಸುಮಾರು 60 ಕಿ.ಮೀ. ದೂರವಿರುವ ಮುಲಕಲಚೆರುವು (ಮದನಪಲ್ಲಿ ತಾಲ್ಲೂಕು, ಆಂಧ್ರ ಪ್ರದೇಶ) ರೈಲ್ವೆ ನಿಲ್ದಾಣಕ್ಕೂ ಮತ್ತು ಚಿಕ್ಕಬಳ್ಳಾಪುರದಿಂದ ಸುಮಾರು 35 ಕಿ. ಮೀ. ದೂರ ಇರುವ ಗೌರಿಬಿದನೂರು ರೈಲ್ವೆ ನಿಲ್ದಾಣ (ಬೆಂಗಳೂರು ಹಿಂದೂಪುರ ಮಾರ್ಗ) ಕ್ಕೂ ಸಂಪರ್ಕ ಕಲ್ಪಿಸುವುದರಿಂದ ಕರ್ನಾಟಕ ರಾಜ್ಯದಲ್ಲಿರುವ ಹಿಂದುಳಿದ ಜಿಲ್ಲೆಗಳಲ್ಲಿ ಒಂದಾದ ಕೋಲಾರ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ನಾಂದಿಯಾಗಿ ಜಿಲ್ಲೆಯ ನೂರಾರು ಹಳ್ಳಿಗಳಿಂದಲೂ ಮತ್ತು ಆಂಧ್ರ ಪ್ರದೇಶದ ಅನೇಕ ಸ್ಥಳಗಳಿಂದಲೂ ಸರಕು ಸಾಗಣೆ ಮತ್ತು ಜನ ಸಂಪರ್ಕವನ್ನು ಕರ್ನಾಟಕ ರಾಜ್ಯದ ರಾಜಧಾನಿ ಬೆಂಗಳೂರು ನಗರಕ್ಕೆ ನೇರವಾಗಿ ಕಲ್ಪಿಸಿ ಸಹಾಯ ಮಾಡಲು ದಕ್ಷಿಣ ರೈಲ್ವೆ ಮಂಡಳಿಗೆ ಜಿಲ್ಲೆಯ ಜನ ಮನವಿ ಮಾಡಿದ್ದಾರೆ.

●

ಕಣ್ಣಾನೂರು : ಫೆಡರೇಷನಿನ ಮನವಿ

1981ರ ಬೀಡಿ ಮಜೂರರ ಮಕ್ಕಳ ಸ್ಕಾಲರ್‌ಶಿಪ್ ಹಣ ಇನ್ನೂ ಪಾವತಿಯಾಗದಿರುವ ಬಗ್ಗೆ ಮತ್ತು ಬೀಡಿ ಮಜೂರರ ವೆಲ್‌ಫೇರ್ ಸ್ಕೀಮಿನಿಂದ ನಡೆಯುವ ಡಿಸ್ಪೆನ್ಸರಿಗಳಲ್ಲಿ ಸರಿಯಾದ ಔಷಧಿ ಇಲ್ಲದ ಬಗ್ಗೆ, ದ. ಕ. ಜಿಲ್ಲಾ ಬೀಡಿ ಮಜೂರರ ಫೆಡರೇಷನಿನ (ಸಿ ಐ ಟಿ ಯು) ಪ್ರತಿನಿಧಿಗಳ ಶಿಷ್ಟ ಮಂಡಲವೊಂದು ಕಣ್ಣಾನೂರಿಗೆ ತಾ|| 20-8-1982 ರಂದು ತೆರಳಿ ಅಸಿಸ್ಟೆಂಟ್ ವೆಲ್‌ಫೇರ್ ಕಮಿಶನರ್‌ರವರಿಗೆ ಮನವಿಯೊಂದನ್ನು ಅರ್ಪಿಸಿತು. ಮನವಿಯನ್ನು ಸ್ವೀಕರಿಸಿದ ಅಸಿಸ್ಟೆಂಟ್ ಕಮಿಶನರ್‌ರವರು 1981ರ ಸ್ಕಾಲರ್‌ಶಿಪ್ಪಿನ ಹಣವನ್ನೂ ಶೀಘ್ರದಲ್ಲಿ ಪಾವತಿ ಮಾಡುವುದಾಗಿಯೂ, ಡಿಸ್ಪೆನ್ಸರಿಗಳಲ್ಲಿ ಸರಿಯಾಗಿ ಮದ್ದು ಸಿಗುವ ಏರ್ಪಾಡು ಮಾಡುವುದಾಗಿಯೂ ಭರವಸೆಯಿತ್ತರು. 1982ರ ಸ್ಕಾಲರ್‌ಶಿಪ್ ಅರ್ಜಿ ಕಳುಹಿಸಿದಾಗ ತಡವಾದರೂ ಅದನ್ನು ಸ್ವೀಕರಿಸುವ ಭರವಸೆಯಿತ್ತರು.

ಶಿಷ್ಟ ಮಂಡಲದಲ್ಲಿ ದ. ಕ. ಜಿಲ್ಲಾ ಬೀಡಿ ಮಜೂರರ ಫೆಡರೇಷನಿನ (ಸಿ. ಐ.ಟಿ.ಯು.) ಕಾರ್ಯದರ್ಶಿ ಕಾಂ| ಯು.ಬಿ.ಲೋಕಯ್ಯ, ಜೊತೆಕಾರ್ಯದರ್ಶಿ ಜೆ ಬಾಲಕೃಷ್ಣ ಶೆಟ್ಟಿ ಮತ್ತು ಅಖಿಲ ಭಾರತ ಬೀಡಿ ಫೆಡರೇಷನಿನ ಪ್ರಧಾನ ಕಾರ್ಯದರ್ಶಿ ಕಾಂ| ಕಣ್ಣನ್ ಇದ್ದರು.

ಅಣ್ವಸ್ತ್ರಗಳಿಗೆ ಧಿಕ್ಕಾರ !

(೧ನೇ ಪುಟದಿಂದ)

ಈಗ ಈ ಚಳುವಳಿಯು ಬೆಳೆಯುತ್ತಿದೆ. ಕೆನಡಾ, ಜಪಾನ್, ಅಮೇರಿಕಾದಲ್ಲಿ ಚಳುವಳಿ ತೀವ್ರಗೊಳ್ಳುತ್ತಿದೆ. ವಿಶ್ವ ಸಂಸ್ಥೆಯ ವಿಶೇಷ ಅಧಿವೇಶನದ ಸಂದರ್ಭದಲ್ಲಿ ಜೂನ್ 12 ರಂದು ನ್ಯೂಯಾರ್ಕ್ ನಗರವು ಅಣು ನಿಶಸ್ತ್ರೀಕರಣಕ್ಕಾಗಿ ಒತ್ತಾಯಿಸುವ ಒಂದು ಮಿಲಿಯ ಜನರ ಬಲಿಷ್ಟ ಮೆರವಣಿಗೆಯನ್ನು ಕಂಡಿತು. ಈ ಚಳುವಳಿಯ ಶಕ್ತಿಯು ಹಿನ್ನಲೆಯಲ್ಲಿ ಅಮೇರಿಕಾ ಸಂಯುಕ್ತ ಸಂಸ್ಥಾನದ ನಗರ, ಪಟ್ಟಣಗಳಲ್ಲಿ ಕಂಕಣಬದ್ಧವಾದ ಆಳವಾದ ಜನಭಿಪ್ರಾಯ ರೂಢಿಸುವ ಕೆಲಸ ನಡೆದಿರುವುದು ಗೋಚರಿಸುತ್ತದೆ. "ಅಣು ಮುಕ್ತ ವಲಯ" ಚಳುವಳಿಯೊಂದಿಗೆ ನಿಕಟವಾಗಿರುವ "ಶಾಂತಿಯೊಂದಿಗೆ ಕೆಲಸ" ಪ್ರಚಾರವೂ ಗಮನೀಯವಾದದ್ದು. "ಅಣುಯುಕ್ತವಲಯ" ಚಳುವಳಿಯು ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಅಣುನಿಶಸ್ತ್ರೀಕರಣಕ್ಕೆ ಮೊದಲ ಹಜ್ಜೆಯಾಗಿ ಅಪಾರ ಜನ ಬೆಂಬಲ ಪಡೆದಿದೆ.

ಬೋಸ್ಟನ್ ಇಂತಹ ನಗರಗಳಲ್ಲಿ ಒಂದಾಗಿದ್ದು ಈ ಪ್ರಚಾರವು ಜನಮನವನ್ನು ಗೆದ್ದಿದೆ. ಹಾಗೂ ಇಲ್ಲಿನ ಜನತೆ ಹೆಚ್ಚಿನ ಬಹುಮತದೊಂದಿಗೆ "ಶಾಂತಿಯೊಂದಿಗೆ ಕೆಲಸ"ಕ್ಕೆ ಮತವಿತ್ತಿದ್ದಾರೆ. ಈ ಚಳುವಳಿಯು ಮೂರು ಪ್ರದೇಶಗಳಲ್ಲಿ ಕಡಿತ ಉಂಟುಮಾಡುವ ಸೂಚನೆ ಇತ್ತಿದೆ. ಮೊದಲನೆಯದು ಈಡೇರಿದರೆ 20,940 ಮಿಲಿಯ ಡಾಲರ್ ಉಳಿತಾಯವಾಗುತ್ತದೆ. ಎರಡನೆಯದಾಗಿ ವಿದೇಶಿ ಆಕ್ರಮಣವನ್ನು ನಿಲ್ಲಿಸುವುದರಿಂದ 15,580 ಮಿಲಿಯ ಡಾಲರ್‌ಗಳು ಉಳಿತಾಯ ಆಗುತ್ತದೆ. ಮೂರನೆಯದಾಗಿ ಅನುಪಯುಕ್ತ ಮತ್ತು ದುಂದು ವೆಚ್ಚದ ಯುದ್ಧಾಸ್ತ್ರಗಳನ್ನು ತಯಾರಿಸಲು ಹಣ ವ್ಯಯಿಸುವುದನ್ನು ತಡೆಗಟ್ಟುವುದರಿಂದ 6,780 ಮಿಲಿಯ ಡಾಲರ್ ಉಳಿಸಬಹುದಾಗಿದೆ.

ಮೂರನೇ ಜಗತ್ತಿನಲ್ಲಿ ಚಳುವಳಿ :

ಯುದ್ಧ ವಿರೋಧಿ ಚಳುವಳಿಯು ಏಷ್ಯಾ, ಆಫ್ರಿಕಾ, ಲ್ಯಾಟಿನ್ ಅಮೇರಿಕಾದ ರಾಷ್ಟ್ರಗಳಿಗೆ ಮತ್ತು ಜನತೆಗೆ ತೀರಾ ಅಗತ್ಯವಾದದ್ದು. ಅಣ್ವಸ್ತ್ರಗಳಿಂದ ಸರ್ವನಾಶದ ಬೆದರಿಕೆ ಮತ್ತು ಶಸ್ತ್ರ ಪೈಪೋಟಿಯ ಹೊರೆಯೊಂದಿಗೆ ಇತರ ನಿರ್ಧಿಷ್ಟವಾದ ಅಪಾಯಗಳನ್ನು ಈ ಜನತೆ ಎದುರಿಸುತ್ತಿದ್ದಾರೆ. ಈ ಎಲ್ಲಾ ವಲಯಗಳನ್ನು ತಮ್ಮ ಮುಖ್ಯ ಆಸಕ್ತಿಯ ಸ್ಥಳಗಳೆಂದು ಘೋಷಿಸುವ ಮೂಲಕ ಸಾಮ್ರಾಜ್ಯಶಾಹಿ ಅಮೇರಿಕಾವು ಈ ರಾಷ್ಟ್ರಗಳಿಗೆ ತತ್‌ಕ್ಷಣದ ಯುದ್ಧ ಬೆದರಿಕೆ ಮತ್ತು ಆಂತರಿಕ ಮಿಲಿಟರಿ ಹಸ್ತಕ್ಷೇಪದ ಬೆದರಿಕೆಯನ್ನೊಡ್ಡಿದೆ. ಇಸ್ರೇಲ್, ದಕ್ಷಿಣ ಆಫ್ರಿಕಾ ಮತ್ತು ಪಾಕೀಸ್ಥಾನದ ಮಿಲಿಟರಿ ಸರ್ವಾಧಿಕಾರ ಅಮೇರಿಕಾದ ಯುದ್ಧ ಪಿಪಾಸುತನಕ್ಕೆ ಕುಮ್ಮಕ್ಕು ನೀಡುತ್ತದೆ. ಈ ಬೆಳವಣಿಗೆ ಭಾರತಕ್ಕೂ ಬೆದರಿಕೆಯಾಗಿದೆ.

ಈ ಮೂಲಕ ಯೂರೋಪಿನ ಯುದ್ಧ ವಿರೋಧಿ ಚಳುವಳಿ ಮತ್ತು ಜಗತ್ತಿನ ವಿವಿದೆಡೆ ನಡೆಯುತ್ತಿರುವ ಸಂಘರ್ಷಗಳಿಗೆ ರಾಜಕೀಯ ಪರಿಹಾರ ಕಂಡುಕೊಳ್ಳಬೇಕೆನ್ನುವ ಬೇಡಿಕೆಗಳು ಪರಸ್ಪರ ಸಂಬಂಧಿಸಿವೆ. ಜಗತ್ತಿನ ಎಲ್ಲಾ ವಲಯಗಳ ಶಾಂತಿಪ್ರಿಯ ಶಕ್ತಿಗಳ ಸೌಹಾರ್ದತೆಯು ಇಂದಿನ ಅಗತ್ಯತೆಯಾಗಿದೆ.

ಪ್ರಧಾನಿಯ ಬೇಜವಾಬ್ದಾರಿ ಉತ್ತರ

(1ನೇ ಪುಟದಿಂದ)

ಅವಿಶ್ವಾಸ ಸೂಚನೆಯಲ್ಲಿ ಮಾಡಿರುವ ಇತರ ಸಾಮಾಜಿಕ, ಸಾಂಸ್ಕೃತಿಕ ಆರ್ಥಿಕ ವಿಷಯಗಳ ಬಗೆಗಿನ ಟೀಕೆಗಳಿಗೆ ಪ್ರಧಾನಿಯವರು ಉತ್ತರಿಸಲೇ ಇಲ್ಲ. 'ಲೋಕಸಭೆಯ ಕಾರ್ಯಾಚರಣೆಯ ಬಗ್ಗೆ ತನಗೆ ಅತೃಪ್ತಿಯಿದೆ ಎನ್ನುವುದು ಪ್ರಧಾನಿಯ ಸಮಾನಚಿಂತಕ ರಾಷ್ಟ್ರಪತಿಬೇಕೆನ್ನುವುದು, ಜಗನ್ನಾಥ ಮಿಶ್ರಾ ಅಥವಾ ಗುಂಡೂರಾವ್ ಅಡಿಯಾಳಾಗಿ ಪತ್ರಿಕೆಗಳಿರಬೇಕೆನ್ನುವುದು ಇವೆಲ್ಲಾ ಕಾಂಗ್ರೆಸ್‌ನ ದುರಾಡಳಿತ ಬಯಲಿಗೆ ಬಾರದಂತೆ ಮಾಡುವ ತುಡಿಲ ಸಾಧನಗಳು.

ಪ್ರಜಾಪ್ರಭುತ್ವ ಹಕ್ಕುಗಳ ಮೇಲಿನ ಧಾಳಿ, ಲೋಕಸಭೆಯಲ್ಲಿ ವಿರೋಧ ಪಕ್ಷಗಳ ಕಾರ್ಯನಿರ್ವಹಣೆಯ ಮೇಲಿನ ಧಾಳಿಯ ವಿರುದ್ಧ ವಿರೋಧ ಪಕ್ಷಗಳು ಒಟ್ಟಾಗಿ ನಿಂತಿರುವುದು ಮತ್ತು ಪ್ರತಿಭಟಿಸುವುದರಿಂದ ಪ್ರಧಾನಿಗೆ ಮತ್ತು ಅನುಯಾಯಿಗಳಿಗೆ ತಮಗೆ ಬೇಕಾದಂತೆ ನಡೆದುಕೊಳ್ಳಲಾಗುವುದಿಲ್ಲ.

●

ಸೆ. ೧: ಶಾಂತಿ ಮತ್ತು ಸೌಹಾರ್ದತಾ ದಿನಾಚರಣೆಯನ್ನು ಯಶಸ್ವಿಗೊಳಿಸಿ

ಎಸ್.ಎಫ್.ಐ. ಕಾರ್ಯಕರ್ತರಿಂದ ಸಚಿವರಿಗೆ ಘೆರಾವೋ

ಬಿ.ಸಿ ಎಂ. ಹಾಸ್ಟಲ್‌ಗಳಲ್ಲಿ ಕ್ಯಾರಿ ಓವ್ವರ್ ಪಡೆದ ವಿದ್ಯಾರ್ಥಿಗಳಿಗೆ ಮರು ಪ್ರವೇಶಕ್ಕೆ ಒತ್ತಾಯಿಸಿ ಒಂದು ತಿಂಗಳಿಂದ ಒತ್ತಾಯಿಸುತ್ತಿದ್ದರೂ ಯಾವುದೇ ಪ್ರತಿಫಲ ದೊರೆಯದ ಕಾರಣ ಆಗಸ್ಟ್ 20 ರಂದು ಎಸ್. ಎಫ್.ಐ. ಬೆಂಗಳೂರು ನಗರ ಸಮಿತಿಯ ಕಾರ್ಯಕರ್ತರು ಸಮಾಜ ಕಲ್ಯಾಣ ಸಚಿವರನ್ನು ಘೆರಾವೋ ಮಾಡಿದರು. ಸಭೆಯನ್ನು ಕರೆಯುವುದಾಗಿ ಆಶ್ವಾಸನೆ ನೀಡಿದ್ದರಿಂದ ಘೆರಾವೋ ಹಿಂತೆಗೆದುಕೊಳ್ಳಲಾಯಿತು.

ನಿಗದಿಪಡಿಸಿದ ಸಭೆಯನ್ನು ಕರೆಯದ್ದರಿಂದ, ಚಳುವಳಿಯನ್ನು ತೀವ್ರಗೊಳಿಸುವ ಉದ್ದೇಶದಿಂದ ಆಗಸ್ಟ್ 23 ರಿಂದ ಎಸ್. ಎಫ್. ಐ. ನೇತೃತ್ವದಲ್ಲಿ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ವಿಧಾನ ಸೌಧದೆದುರು ಅನಿರ್ಧಿಷ್ಟ ಕಾಲದ ಸರದಿ ಉಪವಾಸ ಸತ್ಯಾಗ್ರಹ ಪ್ರಾರಂಭವಾಗಿದೆ.

ಈ ಹೋರಾಟಕ್ಕೆ ವಿದ್ಯಾರ್ಥಿ ವೃಂದ ಬೆಂಬಲ ನೀಡಬೇಕೆಂದು ಕಾಂ| ಆರಾಧ್ಯ ಮತ್ತು ಕಾಂ| ರಾಜಣ್ಣ ಮನವಿ ಮಾಡಿದ್ದಾರೆ.

○

ಮುಂಬೈ ಟೆಕ್ಸ್‌ಟೈಲ್ ಕಾರ್ಮಿಕರಿಗೆ ಬೆಂಬಲ

ಸುಮಾರು 8 ತಿಂಗಳಿಂದ ಧೀರ್ಘ ಹೋರಾಟದಲ್ಲಿರುವ ಮುಂಬೈ ಟೆಕ್ಸ್‌ಟೈಲ್ ಕಾರ್ಮಿಕರಿಗೆ ಬೆಂಬಲ ಸೂಚಿಸಿ 12-8-82 ರಂದು ಬೆಂಗಳೂರಿನ ಮಾಗಡಿರೋಡಿನಲ್ಲಿ ಬಹಿರಂಗ ಸಭೆ ನಡೆಯಿತು. ಸಭೆಯನ್ನುದ್ದೇಶಿಸಿ ಕಾಂ| ಪಿ ಕೆ. ಸುಬ್ರಮಣಿ, ಪಿ. ಜಗನ್ನಾಥ, ಕೆ. ಎಸ್. ನಾರಾಯಣರಾವ್ ಮುಂತಾದವರು ಮಾತನಾಡಿ ಮಹಾರಾಷ್ಟ್ರ ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿದರು. ಸಭೆಯ ಅಧ್ಯಕ್ಷತೆಯನ್ನು ಕಾಂ| ಶೆಲ್ವರಾಜ್ ವಹಿಸಿದ್ದರು.

ವಿವಾದವನ್ನು ಶೀಘ್ರ ಇತ್ಯರ್ಥಪಡಿಸುವಂತೆ ಸಿ.ಐ.ಟಿ.ಯು.ಗೆ ಸಂಯೋಜಿತ ಯೂನಿಯನ್‌ಗಳು ಪ್ರಧಾನ ಮಂತ್ರಿ ಮತ್ತು ಮಹಾರಾಷ್ಟ್ರ ಮುಖ್ಯ ಮಂತ್ರಿಗೆ ತಂತಿ ಮೂಲಕ ಒತ್ತಾಯಿಸಿವೆ.

ಮೈಕೋ ಕಾರ್ಮಿಕ ಸಂಘದ ವತಿಯಿಂದ ಮುಂಬೈ ಕಾರ್ಮಿಕರಿಗೆ 500 ರೂ.ಗಳನ್ನು, ಬೆಂಗಳೂರು ಜಿಲ್ಲಾ ಸಿ.ಐ.ಟಿ.ಯು. ಸಮಿತಿಯು 1000 ರೂ.ಗಳನ್ನು ಕಳಿಸಿಕೊಟ್ಟಿವೆ.

●

ಮೈಸೂರು :

ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಮಂಡಳಿ ಸಭೆ ಮತ್ತು ಮೈಸೂರು ಜಿಲ್ಲಾ ಸಮ್ಮೇಳನಕ್ಕೆ ಸಿದ್ಧತೆ

ಸೆಪ್ಟಂಬರ್ ತಿಂಗಳ 4 ಮತ್ತು 5ನೇ ದಿನಾಂಕದಂದು ಮೈಸೂರಿನಲ್ಲಿ ನಡೆಯಲಿರುವ ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಮಂಡಲಿ ಸಭೆಗೆ ಭರದಿಂದ ಸಿದ್ಧತೆಗಳು ನಡೆಯುತ್ತಿವೆ. (ಸಭೆಯು ಮೈಸೂರಿನ ವೀರಶೈವ ಸಜ್ಜನ ಸಂಘದ ಛತ್ರ, ಪ್ರಧಾನ ಅಂಚೆ ತಂತಿ ಕಛೇರಿ ಹಿಂಬಾಗ, ಹಳ್ಳದ ಕೇರಿ ಮುಖ್ಯ ರಸ್ತೆಯಲ್ಲಿ ನಡೆಯಲಿದೆ).

ಸಿ.ಐ.ಟಿ ಯು. ಮೈಸೂರು ಜಿಲ್ಲಾ ಪ್ರಥಮ ಸಮ್ಮೇಳನ

ಮೈಸೂರು ಜಿಲ್ಲಾ ಸಿ.ಐ.ಟಿ.ಯು. ಪ್ರಥಮ ಸಮ್ಮೇಳನವು 6-9-1982 ರಂದು ಮೈಸೂರು ನಗರದಲ್ಲಿ ನಡೆಯಲಿದೆ. ಕಾರ್ಮಿಕ ವರ್ಗದ ನಡುವೆ ಅವರ ಬೇಡಿಕೆಗಳಿಗಾಗಿ ಧೀಮಂತ ಹೋರಾಟಗಳನ್ನು ನಡೆಸಿರುವ ಸಿ.ಐ.ಟಿ.ಯು. ಇಂದು ಮೈಸೂರಿನ ಬಲಿಷ್ಠ ಕಾರ್ಮಿಕ ಸಂಘಟನೆಯಾಗಿ ರೂಪುಗೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ನಡೆಯುತ್ತಿರುವ ಜಿಲ್ಲಾ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಲು ಇಲ್ಲಿನ ಸಿ.ಐ.ಟಿ.ಯು. ಕಾರ್ಯಕರ್ತರು ಮತ್ತು ಮುಖಂಡರುಗಳು ಸಿದ್ಧತೆ ನಡೆಸುತ್ತಿದ್ದಾರೆ.

ಸಮ್ಮೇಳನದ ಸಿದ್ಧತೆಗಾಗಿ ವಿವಿಧ ಸಂಘ ಸಂಸ್ಥೆಗಳನ್ನು ಪ್ರತಿನಿಧಿಸುವ ನೂರು ಜನರ ಸ್ವಾಗತ ಸಮಿತಿಯನ್ನು ರಚಿಸಲಾಗಿದೆ. ಸ್ವಾಗತ ಸಮಿತಿಗೆ ಕಾಂ| ಎಂ. ಎನ್. ಉಗ್ರಪ್ಪ ಅಧ್ಯಕ್ಷರಾಗಿ, ಮೋಹನ್‌ಕುಮಾರ್ ಕಾರ್ಯದರ್ಶಿಯಾಗಿ ಆಯ್ಕೆ ಮಾಡಿದ್ದಾರೆ.

ಸಮ್ಮೇಳನದ ನೆನಪಿಗಾಗಿ "ಸ್ಮರಣ ಸಂಚಿಕೆ"ಯೊಂದನ್ನು ಹೊರತರಲಾಗುವುದು. ಸಮ್ಮೇಳನದ ಅಂಗವಾಗಿ ಕಾರ್ಮಿಕರ ಬೃಹತ್ ರ್‍ಯಾಲಿ ಮತ್ತು ಸಾರ್ವಜನಿಕ ಸಭೆಯನ್ನು ನಡೆಸಲಾಗುವುದು. ಸಭೆಯನುದ್ದೇಶಿಸಿ ರಾಜ್ಯ ಸಿ.ಐ.ಟಿ.ಯು. ಅಧ್ಯಕ್ಷರಾದ ಕಾಂ| ಸೂರ್ಯನಾರಾಯಣರಾವ್, ಪ್ರಧಾನ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪ ಮತ್ತಿತರ ಮುಖಂಡರುಗಳು ಮಾತನಾಡಲಿದ್ದಾರೆ.

ಕನಿಷ್ಟಕೂಲಿ ಜಾರಿಗಾಗಿ ಒತ್ತಾಯಿಸಿ ಹೋಟೆಲ್ ಕಾರ್ಮಿಕರ ಮೆರವಣಿಗೆ

ಸರಕಾರ ನಿಗದಿಪಡಿಸಿದ ಕನಿಷ್ಟ ಕೂಲಿಯನ್ನು ಶೇ 95ರಷ್ಟು ಹೋಟೆಲ್‌ಗಳು ಜಾರಿ ಮಾಡದಿರುವುದನ್ನು ಪ್ರತಿಭಟಿಸಿ 19-8-82 ರಂದು ಸುಮಾರು 700 ಕಾರ್ಮಿಕರು ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕ ಸಂಘ (ಸಿ. ಐ. ಟಿ. ಯು.)ದ ಆಶ್ರಯದಲ್ಲಿ ಮೆರವಣಿಗೆ ನಡೆಸಿ ಲೇಬರ್ ಕಮೀಷನರ್‌ರವರಿಗೆ ಮನವಿ ಸಲ್ಲಿಸಿದರು.

ಮೆರವಣಿಗೆಯ ನೇತೃತ್ವ ವಹಿಸಿದ ಕಾಂ| ರಾಜನ್ ಮತ್ತು ಆಡವೀಶ್ ಇವರುಗಳು ಲೇಬರ್ ಕಮಿಷನರ್‌ರವರಿಗೆ ಭೇಟಿಯಾಗಿ, ಈ ಹಿಂದೆ ಸಂಘದೊಂದಿಗೆ ಒಪ್ಪಂದ ಮಾಡಿಕೊಂಡ ಮಾಲೀಕರ ಸಂಘದವರು ಒಪ್ಪಂದವನ್ನು ಉಲ್ಲಂಘಿಸುತ್ತಿರುವುದನ್ನು ಸಾಕ್ಷಾಧಾರ ಸಮೇತ ವಿವರಿಸಿದರು.

ಇದರೊಟ್ಟಿಗೇ ವಿನಾಕಾರಣ ಬೇರೆ ಬೇರೆ ಹೋಟೆಲ್ (ಹೋಟೆಲ್ ತಾಜ್, ರಿವೋಲಿ ಇತ್ಯಾದಿ) ಗಳಲ್ಲಿ ಕಾರ್ಮಿಕರನ್ನು ವಜಾಮಾಡಿರುವುದಾಗಿ ಮನವಿ ಪತ್ರದಲ್ಲಿ ತಿಳಿಸಲಾಗಿತ್ತು.

ಕುಂದಾಪುರ :

'ವರ್ಗ ಹೋರಾಟದಿಂದ ಮಾತ್ರ ಪರಿಹಾರಸಾಧ್ಯ'

"ಕೇವಲ ಅಂತರ್ಜಾತಿಯ ವಿವಾಹ, ಸಹಪಂಕ್ತಿ ಭೋಜನ, ದಲಿತರಿಗೆ ದೇವಸ್ಥಾನ ಪ್ರವೇಶದ ಕಾರ್ಯಕ್ರಮಗಳಿಂದ ಮಾತ್ರ ಜಾತಿವಿನಾಶ ಸಾಧ್ಯವಿಲ್ಲ. ವರ್ಗ ಹೋರಾಟದಿಂದ ಮಾತ್ರ ಸಮಸ್ಯೆ ಪರಿಹಾರ ಸಾಧ್ಯ" ಎಂದು ಸುರತ್ಕಲ್ ಇಂಜಿನೀಯರಿಂಗ್ ಕಾಲೇಜ್ ಪ್ರಾಧ್ಯಾಪಕ ಶ್ರೀ ರಾಜೇಂದ್ರ ಉಡುಪ ತಿಳಿಸಿದರು. ಅವರು 8-8.82 ರಂದು ಕುಂದಾಪುರದಲ್ಲಿ ನಡೆದ ದಲಿತ ಸಂಘರ್ಷ ಸಮಿತಿಯ ಸರ್ವ ಸದಸ್ಯರ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಸಭೆಯನ್ನುದ್ದೇಶಿಸಿ ದ. ಕ. ಜಿಲ್ಲಾ ಸಂಚಾಲಕ ಕಾಂ| ಬಿ. ರಾಮಕೃಷ್ಣ ಅವರು ಮಾತನಾಡುತ್ತಾ, ದಲಿತರ ಮೇಲೆ ದಿನಸಿತ್ಯ ನಡೆಯುವ ಅಮಾನುಷ ದೌರ್ಜನ್ಯದ ವಿರುದ್ಧ ಸಂಘಟಿತ ಹೋರಾಟ ನಡೆಸಬೇಕೆಂದು ಕರೆಕೊಟ್ಟರು.

ಸಭೆಯ ಅಧ್ಯಕ್ಷತೆಯನ್ನು ಬಿ. ಗೋವಿಂದ ಅವರು ವಹಿಸಿದ್ದರು. ಸಭೆಯು ಹೊಸ ಸಂಚಾಲಕರನ್ನಾಗಿ ಎಂ. ಗೋವಿಂದ ಅವರನ್ನು, ಸಹ ಸಂಚಾಲಕರಾಗಿ ಬಿ. ಬಾಬು ಅವರನ್ನು ಆಯ್ಕೆ ಮಾಡಿತು.

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053. Editorial and managerial office ;L-56, K. V. Temple Street ,Sultanpet, Bangalore-560 053. Phone-24154. Printed at Ravee Traders, No. 8/1, J. M. Lane, Balepet Cross, Bangalore-560 053. EDITOR : M. K. BHAT,